ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME-13 ಸಂಪುಟ:13 | ISSUE- ಸಂಚಿಕೆ: 23 | PAGE- ಪುಟ 8 | ಬುಧವಾರ 26.02.2025 | RS.ಬೆಲೆ 2/-

## ಎಚ್ ಡಿ ಕುಮಾರಸ್ವಾಮಿಗೆ ಹಿನ್ನಡೆ: ಡಿನೋಟಿಫಿಕೇಷನ್ ಪ್ರಕರಣ ಅರ್ಜಿ ವಜಾಗೊಳಿಸಿದ ಸುಪ್ರೀಂ ಕೋರ್ಟ್




ನವದೆಹಲಿ:ಫೆ.25:ಹಲಗೆವಡೇರಹಳ್ಳಿ ಡಿನೋಟಿಫಿಕೇಷನ್ ಪ್ರಕರಣ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ ಕುಮಾರಸ್ವಾಮಿಗೆ ಸಂಕಷ್ಟ ತಂದಿಟ್ಟಿದೆ. ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ ಜಮೀನು ಡಿನೋಟಿಷಿಕೇಷನ್ ಸಂಬಂಧ ಕುಮಾರಸ್ವಾಮಿ ವಿರುದ್ಧದ ಪ್ರಕರಣದಲ್ಲಿ ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕುಮಾರಸ್ವಾಮಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು ಇಂದು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಮತ್ತು ರಾಜೇಶ್ ಬಿಂದಾಲ್ ಅವರಿದ್ದ ದ್ವಿಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ. ಕುಮಾರಸ್ವಾಮಿ ಅವರು 2006ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಬನಶಂಕರಿ 5ನೇ ಹಂತದ ಹಲಗೆವಡೇರಹಳ್ಳಿಯಲ್ಲಿ 3 ಎಕರೆ 34 ಗುಂಟೆ ಜಮೀನನ್ನು ಡಿನೋಟಿಫಿಕೇಶನ್ ಮಾಡಿರುವ ಆರೋಪ ಎದುರಿಸುತ್ತಿದ್ದಾರೆ. ಹಲಗೆವಡೇರಹಳ್ಳಿ ಸರ್ವೆ ನಂ. 128, 137 ರಲ್ಲಿನ 2 ಎಕರೆ 24 ಗುಂಟೆ ಜಮೀನನ್ನು ಕಾನೂನುಬಾಹಿರವಾಗಿ ಡಿನೋಟಿಫಿಕೇಷನ್ ಮಾಡಿದ್ದಾರೆ ಎಂದು ದಾಖಲೆಗಳ ಸಮೇತ ಮಹದೇವಸ್ವಾಮಿ 2012ರಲ್ಲಿ ಖಾಸಗಿ ದೂರು ಸಲ್ಲಿಸಿದ್ದರು. ಕುಮಾರಸ್ವಾಮಿ ಜೊತೆಗೆ ಪದ್ಮಾ, ಶ್ರೀ?ದೇವಿ, ಚೇತನ್‌ಕುಮಾರ್, ಕೆ.ಬಿ ಶಾಂತಮ್ಮ, ಎಸ್. ರೇಖಾ ಚಂದ್ರು, ಯೋಗಮೂರ್ತಿ, ಬಿ.ನರಸಿಂಹಲು ನಾಯ್ಡು, ಆರ್. ಬಾಲಕೃಷ್ಣ, ಟಿ. ಮುರುಳಿಧರ್, ಜಿ.ಮಲ್ಲಿಕಾರ್ಜುನ, ಇ.ಎ ಯೋಗೇಂದ್ರನಾಥ, ಪಿ.ಜಗದೀಶ, ಡಿ.ಎಸ್ ದೀಪಕ್, ಎಂ.ಸುಬ್ರಮಣಿ, ಬಾಲಾಜಿ ಇನ್ಫ್ರಾ, ಶುಭೋಧಯ ಬಿಲ್ಡರ್ಸ್, ಸನ್‌ರೈಸ್ ಬಿಲ್ಡರ್ಸ್ ಮತ್ತು ಆರತಿ ಡೆವಲಪರ್ಸ್ ಪ್ರಮುಖರು ಆರೋಪಿತರಾಗಿದ್ದಾರೆ. ಈ ಪ್ರಕರಣದ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದರು. ಅದನ್ನು ಪ್ರಶ್ನಿಸಿ ದೂರುದಾರ ಮಹಾದೇವಸ್ವಾಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಲೋಕಾಯುಕ್ತ ಪೊಲೀಸರ

(2ನೇ ಪುಟ ನೋಡಿ)

# ಸಿಖ್ ವಿರೋಧಿ ದಂಗೆ

## ಕೈ ಮುಖಂಡ ಸಜ್ಜನ್ ಕುಮಾರ್‌ಗೆ ಜೀವಾವಧಿ ಶಿಕ್ಷೆ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಫೆ.25- 1984ರ ಸಿಖ್ ವಿರೋಧಿ ದಂಗೆಯಲ್ಲಿ ಆರೋಪಿಯಾಗಿದ್ದ ಕಾಂಗ್ರೆಸ್‌ನ ಮಾಜಿ ಸಂಸದ ಸಜ್ಜನ್‌ಕುಮಾರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿದೆ. ಸಿಬಿಐ ವಶದಲ್ಲಿದ್ದ ಸಜ್ಜನ್‌ಕುಮಾರ್ ಅವರನ್ನು ತಕ್ಷಣವೇ ತಿಹಾರ್ ಜೈಲಿಗೆ ಕರೆದೊಯ್ಯಲಾಯಿತು. 1984 ನವೆಂಬರ್ 1ರಂದು ದೆಹಲಿಯ ಸರಸ್ವತಿ ವಿಹಾರ್ ಪ್ರದೇಶದಲ್ಲಿ ಜಸ್ವಂತ್ ಸಿಂಗ್ ಹಾಗೂ ಅವರ ಮಗ ತರುಣ್ ದೀಪ್ ಸಿಂಗ್ ಅವರನ್ನು ಕೊಲೆ ಮಾಡಿದ ಆರೋಪದ ಮೇರೆಗೆ ದೆಹಲಿಯ ರೋಜ್ ಅವಿನ್ಯೂ ರಸ್ತೆಯಲ್ಲಿರುವ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಕಾವೇರಿ ಬಾವೇಜಾ ಅವರು ಸಜ್ಜನ್ ಕುಮಾರ್ ಅವರಿಗೆ ಜೀವವಾಧಿ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದರು.

ತಂದೆ ಮತ್ತು ಮಗನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಜ್ಜನ್‌ಕುಮಾರ್ ಅವರನ್ನು ದೋಷಿ ಎಂದು ನ್ಯಾಯಾಲಯ ತೀರ್ಪು ನೀಡಿತ್ತು.

ಸುಮಾರು ದಶಕಗಳ ಕಾಲ ನಡೆದ ಸುದೀರ್ಘ ಕಾಲ

(2ನೇ ಪುಟ ನೋಡಿ)

## ಶಿವರಾತ್ರಿ ದಿನ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶಿವಲಿಂಗ ಪೂಜೆಗೆ ಹೈಕೋರ್ಟ್ ಅನುಮತಿ

ಕಲಬುರಗಿ:ಫೆ.25: ಮಹಾಶಿವರಾತ್ರಿಯ ದಿನದಂದು ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಪ್ರಸಿದ್ಧ ಲಾಡ್ಲೆ ಮಶಾಕ್ ದರ್ಗಾದಲ್ಲಿನ ರಾಘವಚೈತನ್ಯ ಶಿವಲಿಂಗದ ಪೂಜೆಗೆ ಹೈಕೋರ್ಟ್ ವಿಭಾಗೀಯ ಪೀಠ ಮಂಗಳವಾರ ಅನುಮತಿ ನೀಡಿದೆ.

ಮಹಾ ಶಿವರಾತ್ರಿಯಂದು ದರ್ಗಾದಲ್ಲಿನ ಶಿವಲಿಂಗ ಪೂಜೆಗೆ ಅನುಮತಿ ನೀಡುವಂತೆ ಕೋರಿ ಹಿಂದೂ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕಲಬುರಗಿ ಹೈಕೋರ್ಟ್ ವಿಭಾಗೀಯ ಪೀಠ, ಶಿವಲಿಂಗದ ಪೂಜೆಗೆ ಅನುಮತಿ ನೀಡಿದೆ.

ದರ್ಗಾದೊಳಗೆ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಅನುಮತಿ ನಿರಾಕರಿಸಿದ್ದರು.

ಜಿಲ್ಲಾಧಿಕಾರಿ ಅನುಮತಿ ನಿರಾಕರಣೆ ಹಿನ್ನಲೆಯಲ್ಲಿ ಹಿಂದೂ ಸಂಘಟನೆ ಸದಸ್ಯರು ಹೈಕೋಟ9 ಮೊರೆಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ

(2ನೇ ಪುಟ ನೋಡಿ)

## ಕುಂಭಮೇಳಕ್ಕೆ ಹೋಗುವಾಗ ಅಪಘಾತ: ತವರು ತಲುಪಿದ ಮೃತದೇಹ; ಒಡೆದ ಕಣ್ಣೀರ ಕೋಡಿ





ಬೀದರ. ಫೆ. 25 : ಕುಂಭಮೇಳಕ್ಕೆ ತೆರಳುವಾಗ ಅಪಘಾತದಲ್ಲಿ ಮೃತಪಟ್ಟ ಆರು ಜನರ ಮೃತದೇಹಗಳನ್ನು ಸೋಮವಾರ ನಗರಕ್ಕೆ ತರಲಾಯಿತು.

ಉತ್ತರ ಪ್ರದೇಶದ ಬನಾರಸ್ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ, ಮೂರು ಆಂಬುಲೆನ್ಸ್‌ಗಳಲ್ಲಿ ನಗರದ ಲಾಡಗೇರಿಗೆ ಮಧ್ಯಾಹ್ನ ಮೃತದೇಹಗಳನ್ನು ತರಲಾಯಿತು.

ಮೃತದೇಹ ಬರುವ ವಿಷಯ ಮೊದಲೇ ತಿಳಿದಿದ್ದ ಮೃತರ ಸಂಬಂಧಿಕರು ವಿವಿಧ ಭಾಗಗಳಿಂದ ಲಾಡಗೇರಿಗೆ ಬಂದಿದ್ದರು. ಆಂಬುಲೆನ್ಸ್‌ಗಳು ಬಡಾವಣೆಗೆ ಬರುತ್ತಿದ್ದಂತೆ ಸಂಬಂಧಿಕರ ದುಃಖದ ಕಟ್ಟೆ ಒಡೆದು, ಕಣ್ಣೀರ ಕೋಡಿ ಹರಿಯಿತು. ಆಕ್ರಂದನ ಮುಗಿಲು ಮುಟ್ಟಿತ್ತು. ಬಡಾವಣೆಯ ನಿವಾಸಿಗಳು ಮನೆಯ ಮಹಡಿಗಳ ಮೇಲೆ ನಿಂತು ಮೃತಶರೀರಗಳನ್ನು ವೀಕ್ಷಿಸಿದರು. 'ಅಯ್ಯೋ ಹೀಗಾಗಬಾರದಿತ್ತು. ದೇವರು ಬಹಳ ಅನ್ಯಾಯ ಮಾಡಿದ' ಎಂದು ಪರಸ್ಪರ ಮಾತನಾಡುತ್ತಿದ್ದರು. ಲಾಡಗೇರಿ ದೇವಸ್ಥಾನದ ಬಳಿಕ ಕೆಲಕಾಲ ಮೃತರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ನಂತರ ನೇರವಾಗಿ ಮನ್ನಳ್ಳಿ ರಸ್ತೆಯಲ್ಲಿರುವ ಬಿ.ವಿ. ಭೂಮರಡ್ಡಿ ಕಾಲೇಜು ಎದುರಿನ ಸಾರ್ವಜನಿಕ ಸ್ಮಶಾನ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸಂತೋಷಕುಮಾರ (45), ಇವರ ಪತ್ನಿ ಸುನೀತಾ (40) ಅವರನ್ನು ಒಂದು ಕಡೆ, ಇವರ ಅತ್ತೆ ನೀಲಮ್ಮ (62),

(2ನೇ ಪುಟ ನೋಡಿ)

## ನಮ್ಮ ಮನೆಗಳಿಗೆ ನೋ ಎಂಗರ್ ಜೋನ್ ಮಾಡಿಕೊಳ್ಳಿ: ಶಕ್ತಿರಾಜ ಭಾಯಿಜಿ



ಬೀದರ. ಫೆ. 25 : ನಮ್ಮ ಮನೆಗಳಿಗೆ ನೋ ಎಂಗರ್ ಜೋನ್ ಮಾಡಿಕೊಳ್ಳುವಂತೆ ಅಂತರಾಷ್ಟ್ರೀಯ ಪ್ರೇರಣಾದಾಯಿಕ ಪ್ರವಚನಕಾರ ಬಿ.ಕೆ ಶಕ್ತಿರಾಜ ಭಾಯಿಜಿ ನುಡಿದರು.

ರವಿವಾರ ಸಂಜೆ ನಗರದ ಸಾಯಿ ಸ್ಕೂಲ್ ಅವರಣದಲ್ಲಿ ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ ಪಾವನಧಾಮ ವತಿಯಿಂದ ಜರುಗಿದ ಮೂರು ದಿವಸದ ಜೀವನೋತ್ಸವ ಪ್ರವಚನ ಮಾಲಿಕೆಯಲ್ಲಿ ಸಮಾರೋಪ ಮಾತುಗಳನ್ನಾಡಿದರು.

ಸಿಟ್ಟು ತನ್ನ ವೈರಿ, ಶಾಂತಿ ಪರರ ವೈರಿ ಎಂಬ ಗಾದೆಯಂತೆ ನಮ್ಮ ಸಿಟ್ಟು ನಮ್ಮನ್ನೆ ನುಂಗುತ್ತದೆ ಎಂಬ ಪರಿಜ್ಞಾನ ಅಗತ್ಯ. ಇತರರ ತಪ್ಪು ನಮ್ಮ

(2ನೇ ಪುಟ ನೋಡಿ)

## ಕ. ಕಾ. ದಿ. ಸಂ. ಸಂಘದ ಬಹುದಿನಗಳ ಬೇಡಿಕೆ ಈಡೇರಿಸಲಾಗುವುದು : ಕೆ.ವಿ.ಪ್ರಭಾಕರ್ ಭರವಸೆ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು : ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ನೇತೃತ್ವದ ಪದಾಧಿಕಾರಿಗಳ ನಿಯೋಗ ಫೆಬ್ರವರಿ 24 ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮುಖ್ಯಮಂತ್ರಿಯವರ

ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರನ್ನು

ವಿಧಾನಸೌಧದ ಕಚೇರಿಯಲ್ಲಿ ಭೇಟಿ ಮಾಡಿ ಕಳೆದ ಒಂದು ವರ್ಷದಿಂದ ನೆನೆಗುದಿಗೆಬಿದ್ದಿರುವ ಸಂಘದ ಪ್ರಮುಖ ಮೂರು ಬೇಡಿಕೆಗಳನ್ನು ಈಡೇರಿಸಿ

ಕೊಡುವಂತೆ ಮನವಿ ಮಾಡಿತು.

ಸಂಘದ ಮನವಿ ಸ್ವೀಕರಿಸಿ, ಪದಾಧಿಕಾರಿಗಳೊಂದಿಗೆ ಬೇಡಿಕೆಗಳ ಕುರಿತು ಶಾಂತಚಿತ್ತದಿಂದ ಸುಧೀರ್ಘವಾಗಿ ಚರ್ಚಿಸಿದ ಕೆ.ವಿ.ಪ್ರಭಾಕರ್ ಅವರು ಸಂಘದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ಅವರಿಂದ ಈ ಮೂರು ಬೇಡಿಕೆಗಳ ಕುರಿತು ಸಂಪೂರ್ಣ ಮಾಹಿತಿ ಪಡೆದು ಕೊಂಡರು.


ಜನವರಿ 2024 ರಿಂದ ಇಲ್ಲಿಯವರೆಗೆ ಆನೇಕ ಬಾರಿ ಇಲಾಖೆಗೆ , ಸರ್ಕಾರಕ್ಕೆ ಸಂಘದಿಂದ ಮನವಿ ಸಲ್ಲಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ತೊಂದರೆಯಾಗುತ್ತಿದೆ ಎಂದು ರಾಜ್ಯಾಧ್ಯಕ್ಷರು ಮಾಧ್ಯಮ ಸಲಹೆಗಾರರಿಗೆ ಮನವರಿಕೆ ಮಾಡಿಕೊಟ್ಟರು.

ಜಾಹೀರಾತು ನೀತಿ 2013 , ಅನುಷ್ಠಾನ ನಿಯಮಗಳು 2014 ರ ನಿಯಮ 14 ರ ಟಿಪ್ಪಣಿ 3 ರ ಪ್ರಕಾರ ವಾರ್ತಾ ಇಲಾಖೆ ಆಯುಕ್ತರಿಗೆ ಜಾಹೀರಾತು ದರ ಹೆಚ್ಚಳ ಮಾಡಲು ಅಧಿಕಾರ ಇದ್ದರೂ ಸಹ ಕಳೆದ 4 ವರ್ಷಗಳಿಂದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ವಾರ್ತಾ ಇಲಾಖೆ ಆಯುಕ್ತರು ಜಾಹೀರಾತು ದರ ಹೆಚ್ಚಳ ಮಾಡದೇ ಇರುವುದು, ಸರ್ಕಾರದ ಯಾವುದೇ ಆದೇಶ ಇಲ್ಲದೇ ಇದ್ದರೂ ಸಹ, ಪತ್ರಿಕೆಗಳ ಜಾಹೀರಾತು ಬಿಲ್ಲುಗಳಲ್ಲಿ ಏಜೆನ್ಸಿಗಳು ಕಾನೂನು

ಬಾಹಿರವಾಗಿ ಕಡಿತ ಮಾಡುವ ಶೇ.15 ರಷ್ಟು ಕಮಿಷನ್ ಹಣವನ್ನು ತಕ್ಷಣ ನಿಲ್ಲಿಸುವುದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮಪಟ್ಟಿಯಲ್ಲಿ ಇರುವ 5 ವರ್ಷದೊಳಗಿನ ಹಿಂದುಳಿದ ವರ್ಗಗಳ ಮತ್ತು ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಪ್ರತಿ ತಿಂಗಳು ಒಂದು ಪುಟ ಸರ್ಕಾರದ ಪ್ರೋತ್ಸಾಹ ರೂಪದ ಜಾಹೀರಾತು ಬಿಡುಗಡೆ ಮಾಡಲು ಸರ್ಕಾರದಿಂದ ಆದೇಶ ಹೊರಡಿಸುವುದು ಎನ್ನುವ ಬೇಡಿಕೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸಿದ ಮಾಧ್ಯಮ ಸಲಹೆಗಾರರು ಈ ಬೇಡಿಕೆಗಳನ್ನು ಸರ್ಕಾರದಿಂದ ಈಡೇರಿಸಿ ಕೊಡುವುದಾಗಿ ಭರವಸೆ ನೀಡಿದರು. ಶೀಘ್ರದಲ್ಲೇ ಹೊಸ ಜಾಹೀರಾತು ನೀತಿ ಕೂಡ ಜಾರಿಗೆ ಬರಲಿದೆ ಎಂದು ತಿಳಿಸಿದರು.

ಸಂಘದ ನಿಯೋಗದಲ್ಲಿ ಉಪಾಧ್ಯಕ್ಷರಾದ ಭೀಮರಾಯ ಹದ್ದಿನಾಳ, ರಾಮಕೃಷ್ಣ ಮಾಮರ, ಹೆಚ್.ಎಸ್.ಹರೀಶ್, ಪ್ರಧಾನ ಕಾರ್ಯದರ್ಶಿ ಟಿ.ಎಸ್. ಕೃಷ್ಣಮೂರ್ತಿ, ರಾಜ್ಯ ಸಮಿತಿ ನಾಮನಿರ್ದೇಶನ

(2ನೇ ಪುಟ ನೋಡಿ)

# ಲಕ್ಷ್ಮಿಬಾಯಿ ಪಾಟೀಲ ನಿಧನ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಫೆ.25:ಚಿಟಗುಪ್ಪ ತಾಲ್ಲೂಕಿನಉಡಮನಳ್ಳಿಗ್ರಾಮದ ಹಿರಿಯರಾದ ಲಕ್ಷ್ಮಿಬಾಯಿ ಶಿವಲಿಂಗಪ್ಪ ಪಾಟೀಲ (80) ಮಂಗಳವಾರ ನಿಧನರಾದರು.

ಅವರಿಗೆ ಭೂಸೇನಾ ನಿಗಮದ ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಪುತ್ರ ಬಿ.ಎಸ್. ಪಾಟೀಲ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಸ್ವಗ್ರಾಮ ಉಡಮನಳ್ಳಿಯಲ್ಲಿ ಬುಧವಾರ (ಫೆ.26) ಬೆಳಿಗ್ಗೆ 11.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಇಂದು ಹವಾ ಮಲ್ಲಿನಾಥ ಮಹಾರಾಜರ ಆಶ್ರಮದಲ್ಲಿ ಮಹಾ ಶಿವರಾತ್ರಿ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 25 : ಇಂದು ಸಾಯಂಕಾಲ 4 ಗಂಟೆಗೆ ನಗರದಹೊರವಲಯದಲ್ಲಿರುವ ನೌಬಾದ್ ಯಲ್ಲಾಲಿಂಗ ಕಾಲೋನಿಯಲ್ಲಿರುವ ನಿರಗುಡಿ ಹವಾ ಮಲ್ಲಿನಾಥ ಮಹಾರಾಜರ ಆಶ್ರಮದಲ್ಲಿ ಭಾರತ ಮಾತಾ ಸೇವಾ ಸಮಿತಿ ವತಿಯಿಂದ ಮಹಾ ಶಿವರಾತ್ರಿ ಅಂಗವಾಗಿ ಮಾತೆ ಭಾಗ್ಯವಂತಿ ತಾಯಿಯವರ ನೇತೃತ್ವದಲ್ಲಿ ಮಹಾದೇವಲಿಂಗದ ಮಹಾಭಿಷೇಕ ಹಾಗೂ ಸಾಮೂಹಿಕ ಇಷ್ಟಲಿಂಗಾರ್ಚನೆ ಕಾರ್ಯಕ್ರಮ ಜರುಗಲಿದೆ. ಓಂ ಶಿವಶಕ್ತಿ ಸತ್ಸಂಗ ಬಳಗ ಕೇಂದ್ರ ಸಮಿತಿ ಸಂಸ್ಥಾಪಕ ಅಧ್ಯಕ್ಷರಾದ ವೇದಮೂರ್ತಿ ಸಿದ್ರಾಮಯ್ಯ ಸ್ವಾಮಿ ಹಿರೇಮಠ ಅವರಿಂದ ಸಾಮೂಹಿಕ ಪ್ರಾರ್ಥನೆ, ಇಷ್ಟಲಿಂಗಾರ್ಚನೆ, ಭಜನೆ ಹಾಗೂ ಪ್ರವಚನ ಕಾರ್ಯಕ್ರಮ ಜರುಗಲಿದೆ.

ಕಾರಣ ಪರಮ ಪೂಜ್ಯ ಹವಾ ಮಲ್ಲಿನಾಥ ಮಹಾರಾಜರ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತನು. ಮನ ಹಾಗೂ ಧನದಿಂದ ಸಹಕರಿಸಿ ಪೂಜ್ಯರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಆಶ್ರಮದ ಸದ್ಭಕ್ತರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಮಹಾ ಶಿವರಾತ್ರಿ ನಿಮಿತ್ತ ಸಾಮೂಹಿಕ ಇಷ್ಟಲಿಂಗ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 25 : ಬೀದರ್ ತಾಲೂಕಿನ ಸುಕ್ಷೇತ್ರ ಬಾವಗಿಗ್ರಾಮದ ಆರಾಧ್ಯದೈವ, ಪವಾಡ ಪುರುಷ,

ಶ್ರೀ ಗುರುಭದ್ರೇಶ್ವರ ದೇವಾಲಯದಲ್ಲಿ ನಾಳೆ ಮಹಾಶಿವರಾತ್ರಿ ಮಹೋತ್ಸವದ ನಿಮಿತ್ತ ಗುರುಭದ್ರೇಶ್ವರನ ಕರ್ತೃ ಗದ್ದುಗೆಗೆ ಸಂಗೀತ ಮಹಾ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಸಾಯಂಕಾಲ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮ ಜರುಗಲಿದೆ. ನಂತರ ಮಹಾಪ್ರಸಾದ ಸೇವೆ ಕೂಡ ಇದ್ದು ಅದಕ್ಕಾಗಿ ಸಕಲ ಭಕ್ತಾದಿಗಳು ಬಾವಗಿಯ ಸಕಲ ಸದ್ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಭದ್ರೇಶ್ವರ ಸಂಸ್ಥಾನದ ವೇದಮೂರ್ತಿ ಭದ್ರಯ್ಯ ಸ್ವಾಮಿಯವರು ತಿಳಿಸಿದ್ದಾರೆ.

# ಚಿಟಗುಪ್ಪಾ ಪ್ರವಾಸಿ ಮಂದಿರದಲ್ಲಿ ಲೋಕಾಯುಕ್ತ ಅಹವಾಲು ಸಭೆ ಫೆ.27ಕ್ಕೆ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಫೆ.25: ಕರ್ನಾಟಕ ಲೋಕಾಯುಕ್ತ ಬೀದರ ಪೊಲೀಸ್ ಠಾಣೆ ವತಿಯಿಂದ ಚಿಟಗುಪ್ಪಾ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಫೆಬ್ರುವರಿ.27 ರಂದು ಬೆಳಿಗ್ಗೆ 11.30 ಗಂಟೆಯಿಂದ 13:30 ಗಂಟೆಯವರೆಗೆ ಚಿಟಗುಪ್ಪಾ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕ ಕುಂದುಕೊರತೆ/ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಬೀದರ ಪೊಲೀಸ್ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ದಿನಾಂಕದಂದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ನೇರವಾಗಿ ಬಂದು ಸಲ್ಲಿಸಲು ಹಾಗೂ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ: 1 ಮತ್ತು 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಿಎ???ಪಿ ರವರ ಮೊ.ಸಂ–9364062571, ಪಿಐ–1 ರವರ ಮೊ.ಸಂ–9364062672 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಬಿಳ್ಕೋಡುಗೆ ಸಮಾರಂಭದಂಗವಾಗಿ ಸನ್ಮಾನ




ಮಲ್ಲಮ್ಮ ನುಡಿ ವಾರ್ತೆ

ಬೀದರ:ಫೆ.25: ಲೆಫ್ಟನಂಟ್ ಕರ್ನಲ್ ಸಂಜೀವ ಸರೇನ್ ಆಡಳಿತಾಧಿಕಾರಿ(ಎ.ಓ)ರವರ ವರ್ಗಾವಣೆ ನಿಮಿತ್ಯ 32ನೇ ಕರ್ನಾಟಕ ಬಟಾಲಿಯನ್ ಎನ್.ಸಿ.ಸಿ.ಯಲ್ಲಿ ಬೀಳ್ಕೋಡುಗೆ ಸಮಾರಂಭ ಹಮ್ಮಿಕೊಳ್ಳಲಾಯಿತು ಶ್ರೀಯುತರಿಗೆ ಬೀದರಿನ ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದ ಪ್ರಾಂಶುಪಾಲರು (ಎನ್.ಸಿ.ಸಿ. ಯಿಂದ ನಿವೃತ್ತಿ ಹೊಂದಿದ ಮೇಜರಗಳಾದ) ಡಾ. ಪಿ. ವಿಠ್ಠಲರಡ್ಡಿ ಹಾಗೂ ಕರ್ನಾಟಕ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ (ಎನ್.ಸಿ.ಸಿ.ಯಿಂದ ನಿವೃತ್ತಿ ಹೊಂದಿದ) ಚೀಫ್ ಆಫೀಸರ್ ಮಹಮ್ಮದ್ ರಫೀ ತಾಳಿಕೋಟೆ ಅವರನ್ನು ಸನ್ಮಾನಿಸಿದರು.

ಶ್ರೀಯುತರು ಆಡಳಿತಾಧಿಕಾರಿಗಳಾಗಿ ಎರಡು ವರ್ಷ ಹನ್ನೊಂದು ತಿಂಗಳು ಅಮೋಘ ಸೇವೆ ಸಲ್ಲಿಸಿ ವರ್ಗಾವಣೆಗೊಂಡಿದ್ದಾರೆ. ಇವರ ಅಧೀನದ ಎನ್.ಸಿ.ಸಿ. ಕೆಡೇಟ್ಸ್‌ರನ್ನು ಸೇನಾಧಿಕಾರಿಗಳಾಗುವಂತೆ ಪ್ರ–ಶಿಕ್ಷಣ ನೀಡಿದ್ದಾರೆ. ಇವರ ಸೇವಾಧಿಯಲ್ಲಿ ಕೆಡೇಟ್ಸ್‌ಗಳು ಟಿ.ಎಸ್.ಸಿ., ಸಿ.ಎ.ಟಿ.ಸಿ., ಆರ್.ಡಿ.ಸಿ., ಇತ್ಯಾದಿ ಶಿಬಿರಗಳಲ್ಲಿ ಪಾಲ್ಗೊಂಡು ಸಾಧನೆಗೈದಿದ್ದಾರೆ. ಈ ವರ್ಷ 26ನೇ ಜನವರಿ 2025ರ ನವದೆಹಲಿಯ ಗಣರಾಜ್ಯೋತ್ಸವದ ಪರೇಡನಲ್ಲಿ ಕರ್ನಾಟಕ ಹಾಗೂ ಗೋವಾ ಡೈರೆಕ್ಟರೇಟ್ ಬ್ಯಾನರ್ ತರುವಲ್ಲಿ ಶ್ರಮವಹಿಸಿ ಬ್ಯಾನರ ಪಡೆದು ಅದ್ವಿತೀಯ ಸಾಧನೆ ಕೆಡೇಟ್ಸ್‌ಗಳಿಂದ ಸಾಧ್ಯವಾಗಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆಂದು ಡಾ. ಪಿ. ವಿಠ್ಠಲ ರಡ್ಡಿ ತಿಳಿಸಿದ್ದಾರೆ. ಅಲ್ಲದೇ ವಿವಿಧ ಶಾಲಾ ಕಾಲೇಜುಗಳಿಂದ ಸಹ ಶ್ರೀಯುತರಿಗೆ ಸನ್ಮಾನ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಹೊಸದಾಗಿ ವರ್ಗಾವಣೆಗೊಂಡು ಇಲ್ಲಿಗೆ ಆಗಮಿಸಿ ನೂತನವಾಗಿ ಆಡಳಿತಾಧಿಕಾರವಹಿಸಿಕೊಂಡು ಲೇಫ್ಟನಂಟ್ ಕರ್ನಲ್ ಕೌಸ್ತುಭ ದತ್ತಾಜೀರಾವ ಥೊಂಗೆ ಪಾಟೀಲರನ್ನು ಗೌರವದಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬಟಾಲಿಯನ್ ಕಮಾಡಿಂಗ ಅಧಿಕಾರಿ (ಸಿ.ಓ) ಗಳಾದ ಕರ್ನಲ್ ರಾಕೇಶ ಮಿಶ್ರಾರವರು ಮಾತನಾಡಿ ಶ್ರೀಯುತರ ಬಗ್ಗೆ ಶ್ಲಾಘಸಿದರು.

ಕಾರ್ಯಕ್ರಮದಲ್ಲಿ ಸುಬೇದಾರ ಮೇಜರ್ ಟಿಕೇಂದ್ರಸಿಂಗ್, ಮೇಜರ್ ಗೌರಿ ಪಾಟೀಲ, ಕ್ಯಾಪ್ಟನ್ ಎಂ.ಎಸ್.ರಾವುರ, ಲೇಫ್ಟನಂಟ್ ಪಾರ್ವತಿ ಪಾಟೀಲ, ಲೇಫ್ಟನಂಟ್ ಜಗನಾಥ ಧರಶೆಟ್ಟಿ ಅಲ್ಲದೇ ಎಲ್ಲಾ ಎನ್.ಸಿ.ಸಿ. ಅಧಿಕಾರಿಗಳು, ಭೂಸೇನೆ ಸಿಬ್ಬಂದಿ, ಕಛೇರಿ ಸಿಬ್ಬಂದಿ ಹಾಗೂ ವಿವಿಧ ಶಾಲಾ–ಕಾಲೇಜುಗಳ ಎನ್.ಸಿ.ಸಿ. ಕೆಡೇಟ್ಸ್‌ಗಳು ಉಪಸ್ಥಿತರಿದ್ದರು.

# ಹಳ್ಳಿಖೇಡ (ಬಿ): ಮಾ.4 ರಂದು ಬಜೆಟ್ ಪೂರ್ವಭಾವಿ ಸಭೆ

ಬೀದರ: ಫೆ.25: ಪುರಸಭೆ ಹಳ್ಳಿಖೇಡ (ಬಿ) ವರ್ಷ 2025–26ನೇ ಸಾಲಿನ ವಾರ್ಷಿಕ ಬಜೆಟ್ ಮಂಡನೆ ಸಂಬಂಧ ಮೊದಲನೆ ಸುತ್ತಿನ ಪೂರ್ವಭಾವಿ ಸಾರ್ವಜನಿಕ ಸಭೆಯನ್ನು ಮಾರ್ಚ.4 ರಂದು ಮಧ್ಯಾಹ್ನ 3.30 ಗಂಟೆಗೆ ಪುರಸಭೆ ಸಭೆ ಸಭಾಂಗಣದಲ್ಲಿ ಜರುಗಲಿದೆ ಎಂದು ಹಳ್ಳಿಖೇಡ (ಬಿ) ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಳ್ಳಿಖೇಡ (ಬಿ) ಪಟ್ಟಣದ ನೊಂದಾಯಿತ ವಸತಿ ಕ್ಷೇಮಾಭಿವೃದ್ಧಿ ಸಂಘಗಳು, ನೊಂದಾಯಿತ ಸರ್ಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು, ಇತರೆ ಸಂಘ ಸಂಸ್ಥೆಗಳು ಪ್ರತಿನಿಧಿಗಳು, ಪಟ್ಟಣದ ಗಣ್ಯ ವ್ಯಕ್ತಿಗಳು ಹಾಗೂ ಸಾರ್ವಜನಿಕರು ಸದರಿ ಸಭೆಯಲ್ಲಿ ಭಾಗವಹಿಸಿ ಬಜೆಟ್ ವಿಷಯ ಸಂಬಂಧ ತಮ್ಮ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಕನೀನಿನಿ: ಸಾರ್ವಜನಿಕರು ಯಾವುದೇ ಆಮಿಷಗಳಿಗೆ ಒಳಗಾಗಬಾರದೆಂದು ಮನವಿ

ಬೀದರ:ಫೆ.25: ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ರ ರಡಿ ಜಲಸಂಪನ್ಮೂಲ ಇಲಾಖೆಯ ಅಧಿನಕ್ಕೊಳಪಡುವ ದಿನಗೂಲಿ ನೌಕರರುಗಳನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರುಗಳನ್ನು ಸಕ್ರಮಗೊಳಿಸುವ ಸಂಬಂಧ ಅನಾಮಧೇಯ ವ್ಯಕ್ತಿಗಳು ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳ ಹೆಸರಿನಲ್ಲಿ ಹೊರಡಿಸುತ್ತಿರುವ ನಕಲು ಅಧಿಸೂಚನೆ, ಆದೇಶ, ಪ್ರಕಟಣೆ ಪತ್ರಗಳನ್ನು ಹೊರಡಿಸಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಅಮಾಯಕ, ಬಡ, ಮುಗ್ಧ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಕುರಿತಂತೆ ಸಾರ್ವಜನಿಕರು ಯಾವುದೇ ಆಮಿಷಗಳಿಗೆ ಬಲಿಯಾಗಬಾರದೆಂದು ಬೀದರ ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಲಾಖೆಯ ಕಾರ್ಯಕ್ರಮ, ಯೋಜನೆಗಳು ಯಶಸ್ವಿಯಾಗಬೇಕಾದರೆ

# ಜನಜಾಗೃತಿ ಮುಖ್ಯ:ಡಾ.ಶಂಕ್ರೆಪ್ಪಾ ಮೈಲಾರೆ



ಬೀದರ: ಫೆ.25: ಪ್ರತಿಯೊಂದು ಇಲಾಖೆಯ ಯಾವುದೇ ಕಾರ್ಯಕ್ರಮವು ಹಾಗೂ ಯೋಜನೆಗಳು ಯಶಸ್ವಿಯಾಗಬೇಕಾದರೆ ಜನಜಾಗೃತಿ ಮುಖ್ಯ, ತಾವೆಲ್ಲರೂ ಕ್ಷೇತ್ರ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ವಿವಿಧ ಮಾಧ್ಯಮ, ವಿಧಾನ ಹಾಗೂ ಸಂವಹನದ ಮೂಲಕ ಹಲವಾರು ಆರೋಗ್ಯ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುತ್ತಿರುವ ಫಲವಾಗಿ ಆರೋಗ್ಯ ಕಾರ್ಯಕ್ರಮಗಳು ಯಶಸ್ವಿಯಾಗಿ ಅನುಷ್ಠಾನವಾಗುತ್ತಿವೆ. ಮಾಹಿತಿ ಶಿಕ್ಷಣ ಸಂವಹನ ಚಟುವಟಿಕೆಗಳು ಹೊಸ ಹೊಸ ಅನ್ವೇಷಣೆಗಳನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕೆಂದು ಕಲಬುರಗಿ ವಿಭಾಗೀಯ ಜಂಟಿ ನಿರ್ದೇಶಕರಾದ ಡಾ.ಶಂಕ್ರೆಪ್ಪಾ ಮೈಲಾರೆ ಕರೆ ನೀಡಿದರು.

ಅವರು ಇಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೀದರನ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕಲಬುರಗಿ ವಿಭಾಗ ಮಟ್ಟದ ಐಇಸಿ ಪರಿಶೀಲನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವೀಡಿಯೋ ಪ್ರದರ್ಶನ, ಸಾಮಾಜಿಕ ಜಾಲತಾಣ ಬಳಕೆ ಹಾಗೂ ಟಾರ್ಗೆಟೆಡ್ ಗ್ರೂಪ್ ಅನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮ ನಿರ್ವಹಿಸುತ್ತಿದ್ದು ಒಳ್ಳೆಯ ಬೆಳವಣಿಗೆ ಎಂದು ಪ್ರೋತ್ಸಾಹಿಸಿದರು.

ಬೀದರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸಂಗಪ್ಪ ಕಾಂಬಳೆ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿ ವರ್ಷವೂ ರೊಟೇಶನ್ ಮೂಲಕ ಒಂದೊಂದು ಜಿಲ್ಲೆಯಲ್ಲಿ ಐಇಸಿ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಜರುಗುತ್ತಿದ್ದು, ಈ ಬಾರಿ ಬೀದರ ಜಿಲ್ಲೆಗೆ ಈ ಅವಕಾಶ ದೊರಕಿದ್ದು ಹೊಸ ಹೊಸ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಬೇರೆ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಿರ್ವಹಣೆಯಾದ ಚಟುವಟಿಕೆಗಳನ್ನು ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ಈ ಕಾರ್ಯಕ್ರಮ ಜರುಗಿಸಲಾಗುತ್ತದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಜಂಟಿ ನಿರ್ದೇಶನಾಲಯ ಸಹಾಯಕ ನಿರ್ದೇಶಕರಾದ ಡಾ॥ ಶರಣಬಸಪ್ಪ ಗಣಜಲಖೇಡ, ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮ ಡಾ. ಧ್ಯಾನೇಶ್ವರ ನೀರಗುಡೆ, ಸಂಯೋಜಕರು ರಾಜ್ಯ ಐಇಸಿ ಕೋಶ ಬೆಂಗಳೂರು ಡಾ. ಹಂಸರೇಖಾ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಶಿವಶಂಕರ.ಬಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ದೀಲಿಪ್ ಡೋಂಗರೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ. ಕಿರಣ ಪಾಟೀಲ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಎಸ್.ಕೆ. ಬೊಮ್ಮಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ವಿಭಾಗೀಯ ಜಂಟಿ ನಿರ್ದೇಶನಾಲಯ ಕಲಬುರಗಿ ಶ್ರೀಶೈಲ ದೀವಟಗಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# 'ಸರ್ವಜ್ಞರ ಜೀವನ ಸರ್ವರಿಗೂ ದಾರಿದೀಪ' ಸಹಾಯಕ ಆಯುಕ್ತ



ಮಲ್ಲಮ್ಮ ನುಡಿ ವಾರ್ತೆ

ಡಾ.ಹಂಪಣ್ಣಸಜ್ಜನ್ ಯಾದಗಿರಿ: ಶ್ರೇಷ್ಠ ವಚನಕಾರ ಸರ್ವಜ್ಞ ಅವರ ಜೀವನ ಸರ್ವರಿಗೂ ದಾರಿದೀಪವಾಗಿದೆ ಎಂದು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್ ಹೇಳಿದರು. ಸೋಮವಾರ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸರ್ವಜ್ಞನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಮ್ಮ ಮೂರು ಸಾಲಿನ ವಚನಗಳ ಮೂಲಕವೇ ಇಡಿ ಜನಸಮುದಾಯವನ್ನು ಬಡಿದೆಬ್ಬಿಸುವ ಮೂಲಕ ಜನರಲ್ಲಿ ಅರಿವು ಮೂಡಿಸಿದ್ದರು.

ಬದುಕಿನ ಸಾರವನ್ನು ತಮ್ಮ ಮೊನಚು ಮಾತುಗಳಿಂದ ಮತ್ತು ಬರಹಗಳ ಮೂಲಕದ ಸರ್ವಜ್ಞ ಅವರ ವಚನಗಳಿಂದ ತಿಳಿಯಬಹುದಾಗಿದೆ ಎಂದರು.

ಇಂತಹ ಜ್ಞಾನಿ ಜನಿಸಿದ ಕುಂಬಾರ ಸಮುದಾಯದ ಜನರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದು ಡಾ.ಸಜ್ಜನ್ ಹೇಳಿದರು. ಶಿಕ್ಷಣದಿಂದಲೇ ಸರ್ವವೂ ಸಾಧ್ಯವಿದೆ. ಕಾರಣ ತಮ್ಮ ಮಕ್ಕಳಿಗೆ ಎಷ್ಟೇ ಕಷ್ಟವಾದರೂ ಶಿಕ್ಷಣ ಕೊಡಿಸುವುದು ಮರೆಯಬೇಡಿ ಎಂದರು. ವಿಶೇಷ ಉಪನ್ಯಾಸ ನೀಡಿದ ಸಹ ಶಿಕ್ಷಕ ದೇವಿಂದ್ರಪ್ಪ ಕರಡಕಲ್, ಸರ್ವಜ್ಞ ಎಂದ–ರೇ ಎಲ್ಲವೂ ಬಲ್ಲವರು ಎಂದರ್ಥ. ಸರ್ವಜ್ಞರು ಲೋಕದ ಆಗುಹೋಗುಗಳ ಮೇಲೆಯೇ ಮೂರು ಸಾಲಿನ ನೇರ ನುಡಿಗಳನ್ನು ಬರೆಯುವ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದಿದ್ದ ಮಹಾನ ವ್ಯಕ್ತಿ ಎಂದು ಬಣ್ಣಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಾಜದ ಮುಖಂಡರಾದ ಭೀಮರಾವ ಹಂಗರಗಿ, ಸಮಾಜದಲ್ಲಿ ಒಗ್ಗಟ್ಟು ಮುಖ್ಯ, ಇದರ ಕೊರತೆ ನಮ್ಮಲ್ಲಿ ಬಹಳವಿದೆ. ಸಣ್ಣ ಸಮಾಜಕ್ಕೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆಯೇ ವಿವಿಧ ಸೌಲಭ್ಯಗಳು ಸಿಗಬೇಕೆಂದರು.

ಕುಂಬಾರ ಸಮಾಜದ ಜಿಲ್ಲಾಧ್ಯಕ್ಷ ದೇವಿಂದ್ರಪ್ಪ ದರ್ಶನಾಪುರ, ಗೌರವಾಧ್ಯಕ್ಷ ಹಣಮಂತಪ್ಪ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ಬಂಗಾರಪ್ಪ ಯರಗೋಳ್, ನರಸಪ್ಪ ಸೌರಾಷ್ಟಹಳ್ಳಿ, ರಮೇಶ, ಶಿವರಾಜ, ಶ್ರೀಕಾಂತ, ಶಿವಶರಣಪ್ಪ, ಭೀಮರಾಯ, ಗಂಗಾಧರ ಗುಂಡಳ್ಳಿ ಸೇರಿದಂತೆಯೇ ಇತರರಿದ್ದರು. ಖ್ಯಾತ ಸಂಗೀತ ಕಲಾವಿದ ಚಂದ್ರಶೇಖರ ಗೋಗಿ ಪ್ರಾರ್ಥಿಸಿದರು. ದೇವಿಂದ್ರಪ್ಪ ಯರಗೋಳ ನಿರೂಪಿಸಿದರು.

ಆರಂಭದಲ್ಲಿ ಹೊಸಳ್ಳಿ ಕ್ರಾಸದಿಂದ ಕಾರ್ಯಕ್ರಮದ ಸ್ಥಳದವರೆಗೂ ಭವ್ಯ ಮೆರವಣಿಗೆ ನಡೆಯಿತು.

# ಕಚಕನೂರಲ್ಲಿ ಸ್ಟಾರ್ ವಿದ್ಯುತ್ ದೀಪಗಳು ಅಳವಡಿಕೆ,ಗ್ರಾಮಸ್ಥರು ಹರ್ಷ.!

## ಹದಿನೈದನೇ ಹಣಕಾಸು ಅನುದಾನಲ್ಲಿ ಉತ್ತಮ ಕಾರ್ಯ..ಗ್ರಾಪಂ ಅಧ್ಯಕ್ಷೆಗೆ ಮೆಚ್ಚುಗೆ

ಸುರಪುರ: ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ರಸ್ತೆಯ ವಿದ್ಯುತ್ ಕಂಬಕ್ಕೆ ಬಲ್ಬ್ ಹಾಕುವುದು ಸರ್ವೆ ಸಾಮಾನ್ಯ.ಆದರೆ ಈ ಊರಲ್ಲಿ ಗ್ರಾಪಂ ಅಧ್ಯಕ್ಷರು ಒಂದು ಹೆಜ್ಜೆ ಮುಂದೆ ಹೋಗಿ ಮಹತ್ವದ ಕೆಲಸ ಮಾಡಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕಚಕನೂರ ಗ್ರಾಮ ಪಂಚಾಯಿತಿ ವತಿಯಿಂದ ಕಚಕನೂರ ಗ್ರಾಮದಲ್ಲೆ ಹದಿನೈದನೇ ಹಣಕಾಸು ಅನುದಾನದಲ್ಲಿ ಗ್ರಾಪಂ ಅಧ್ಯಕ್ಷೆ ದೇವಿಕೆಮ್ಮ ಡಿ. ಮಕಾಶಿ ಅವರು ಗ್ರಾಮಕ್ಕೆ ಆಕರ್ಷಕವಾಗಿ ಬೆಳಕು ನೀಡಿದ್ದಾರೆ.ಇನ್ನು ಈ ಸ್ಟಾರ್ ವಿದ್ಯುತ್ ಲೈಟ್ ಕಂಬಗಳನ್ನು ಪೂಜೆ ಕಾರ್ಯಕ್ರಮದೊಂದಿಗೆ ಗ್ರಾಮದ ಮುಖಂಡರ ಹಾಗೂ ಜನರ ಸಮ್ಮುಖದಲ್ಲಿ ಉದ್ಘಾಟಿಸಲಾಯಿತು.

ಗ್ರಾಮದ ಮುಖ್ಯ ರಸ್ತೆಯಲ್ಲಿ ಬರುವ ವಾಲ್ಮೀಕಿ ವೃತ್ತದ ಬಳಿ ಹಾಗೂ ಆಂಜನೇಯ ದೇವಸ್ಥಾನ ಬಳಿ ಎರಡು ಸ್ಟಾರ್ ವಿದ್ಯುತ್ ಲೈಟ್ ಗಳು ಅಳವಡಿಸಿದ್ದು, ಬಹುದೊಡ್ಡದಾದ ನಲವತ್ತು ಅಡಿ ಉದ್ದದ ಕಬ್ಬಿಣದ ಕಂಬ, ಮೇಲೆ ದೊಡ್ಡ ಆರು ಲೈಟ್ ಗಳು ಹಾಕಿದ್ದು, ಗ್ರಾಮದಲ್ಲಿ ಓಡಾಡುತ್ತಿ–ರೋ ಸಣ್ಣ ಮಕ್ಕಳಿಂದ ಹಿಡಿದು ವಯಸ್ಕರರವರೆಗೆ ಖುಷಿ ತಂದಿದೆ.ಇನ್ನು ಈ ವಿದ್ಯುತ್ ಸ್ಟಾರ್ ಲೈಟ್ ಗಳು ಹದಿನೈದನೇ ಹಣಕಾಸಿನ ಅನುದಾನಲ್ಲಿ ಅಂದಾಜು ಮೊತ್ತ ಎರಡೂವರೆ ಲಕ್ಷ ರೂಪಾಯಿ ಖರ್ಚಾಗಿದ್ದು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರು ಸರ್ವ ಸದಸ್ಯರ ಒಪ್ಪಿಗೆ ಮೆರೆಗೆ ಈ ಕೆಲಸ ಮಾಡಲಾಗಿದೆ.

ಈ ರೀತಿ ಇನ್ನುಳಿದ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರುಗಳು ಸರ್ಕಾರದಿಂದ ಬರುವ ಅನುದಾನದಲ್ಲಿ ವಿವಿಧ ರೀತಿಯ ಉತ್ತಮ ಕೆಲಸಗಳು ಮಾಡಿದರೆ ಸುರಪುರ ಹಾಗೂ ಹುಣಸಗಿ ತಾಲೂಕಿನ ಗ್ರಾಮಗಳು ಅಭಿವೃದ್ಧಿ ಆಗುವುದರ ಜೊತೆಗೆ ಸ್ವಚ್ಛತೆ ಮತ್ತು ಸುಂದರವಾಗಿ ಕಾಣುತ್ತವೆ ಅನ್ನೋದು ಸಾರ್ವಜನಿಕರ ಆಶಯ. ಇನ್ನು ತಾಲೂಕಿನ ಕೆಲ ಗ್ರಾಮ ಪಂಚಾಯಿತಿಗಳಲ್ಲಿ ಉದ್ಯೋಗ ಖಾತ್ರಿ ಹಾಗೂ ಹದಿನೈದನೇ ಹಣಕಾಸು ಯೋಜನೆಯಲ್ಲಿ ಕೆಲ ಕಾಮಗಾರಿಗಳ ಬಿಲ್ ಬೋಗಸ್ ಆಗುತ್ತಿದ್ದು, ಈ ರೀತಿ ನಡೆಯುವ ಅವ್ಯವಹಾರಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಕೆಲಸ ಮಾಡಬೇಕು ಎಂದು ಜನರು ಆರೋಪಿಸಿದ್ದಾರೆ.

ಇನ್ನು ಈ ಸಂದರ್ಭದಲ್ಲಿ ಭೀಮಣ್ಣ ಡಿ. ಮಕಾಶಿ, ಶ್ರೀಕಾಂತ ದೊರೆ, ಕರವೇ ಜಿಲ್ಲಾಧ್ಯಕ್ಷ ದಶರಥ ದೊರೆ, ಪರತುಗೌಡ ಬಿರಾದಾರ, ನಾರಾಯಣ ದೊರೆ, ಗೋಪಣ್ಣ ದೊರೆ, ಭೀಮಣ್ಣ ವಕೀಲರು, ವಿರುಪಾಕ್ಷಿ ಚಲುವಾದಿ ಸೇರಿದಂತೆ ಗ್ರಾಮಸ್ಥರು ಇದ್ದರು.

ನಮ್ಮ ಗ್ರಾಮದೊಳಗ ಇನ್ನು ಬ್ಯಾರೆ ಕಡೆ ಮತ್ತೊಂದು ಕಂಬ ಹಾಕಬೇಕು. ಗ್ರಾಪಂ ಅನುದಾನವನ್ನ ಸಮರ್ಪಕವಾಗಿ ಬಳಕೆ ಮಾಡಕೊಂಡು ಕೆಲಸ ಮಾಡ್ತಿದ್ದೀವಿ. ಮುಂದಿನ ದಿನಗಳಲ್ಲಿ ಗ್ರಾಪಂ.ಗೆ ಸಂಬಂಧಪಟ್ಟ ಹಳ್ಳಿಗಳಲ್ಲೂ ಅಭಿವೃದ್ಧಿ ಕೆಲಸ ಮಾಡುತ್ತೇವೆ.

ದೇವಿಕೆಮ್ಮ ಡಿ. ಮಕಾಶಿ, ಕಚಕನೂರ ಗ್ರಾಪಂ ಅಧ್ಯಕ್ಷೆ

# ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಹಣ ದುರ್ಬಳಕೆ ಆರೋಪ ಫೆ.27 ರಿಂದ ರಾಜ್ಯಾದ್ಯಂತ ಬಿಜೆಪಿ ಜನಾಂದೋಲನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25–ರಾಜ್ಯ ಸರ್ಕಾರ ಎಸ್.ಸಿ.ಎಸ್.ಪಿ ಮತ್ತು ಟಿಎಸ್‌ಪಿ ಹಣವನ್ನು ದುರ್ಬಳಕೆಮಾಡಿಕೊಂಡಿರುವುದರ ವಿರುದ್ಧ ಭಾರತೀಯ ಜನತಾ ಪಕ್ಷ ಫೆಬ್ರವರಿ 27 ರಿಂದ ಮಾರ್ಚ 01 ವರೆಗೆ ರಾಜ್ಯಾದ್ಯಂತಜನಾಂದೋಲನ ಕಾರ್ಯಕ್ರಮಹಮ್ಮಿಕೊಂಡಿದೆ ಎಂದು ಜನಾಂದೋಲನದ ಸಂಯೋಜಕ ರಾಮಣ್ಣ ಬಲ್ಲಹುಣ್ಸೆ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಛೇರಿಯಲ್ಲಿ ಮಂಗಳವಾರ ನಡೆದ ಜನಾಂದೋಲನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದಲಿತ ದ್ರೋಹಿ ಸರ್ಕಾರದ ವಿರುದ್ಧ ಜನಾಂದೋಲನ ಹಮ್ಮಿಕೊಳ್ಳಲಾಗಿದ್ದು,ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ,ಮಾಜಿಸಂಸದ ಡಾ.ಉಮೇಶ ಜಾಧವ, ಅಮರೇಶ್ವರನಾಯಕ,ಬಳ್ಳಾರಿ ಹನುಮಂತಪ್ಪ, ಗುರುರಾಜ ಗಂಟಿಹೊಳೆ,ರಾಜುನಾಯ್ಕರ, ಪ್ರತಾಪ್‌ಗೌಡಪಾಟೀಲ,ಅರುಣ ಶಹಾಪುರ ನೇತೃತ್ವದಲ್ಲಿ 14 ತಂಡಗಳನ್ನು ರಚಿಸಲಾಗಿದೆ ಎಂದು ಹೇಳಿದರು.



ರಾಮಣ್ಣ ಬಲ್ಲಹುಣ್ಸೆ ಹಾಗೂ ಪಿ.ಓಂಕಾರಮಕೂರ ಸಂಯೋಜಕರಾಗಿ ಕಾರ್ಯ ನಿರ್ವಹಿಸುವರು,ಈ ತಂಡಗಳು ಫೆಬ್ರವರಿ 27ರಿಂದ ಮಾರ್ಚ 01 ವರೆಗೆ ರಾಜ್ಯ ಪ್ರವಾಸ ಮಾಡಲಿದ್ದು, ಸರ್ಕಾರದ ವಿರುದ್ಧ ಬೃಹತ್ ಆಂದೋಲನ ನಡೆಯಲಿದೆ. ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿಯೂ ಬೃಹತ್ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ವ್ಯಕ್ತಪಡಿಸುವದಾಗಿ ಬಲ್ಲಹುಣ್ಸೆ ತಿಳಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯಕ ಮಾತನಾಡಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಹಣ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ಸರಕಾರದ ವಿರುದ್ಧ ಈ ಜನಾಂದೋಲನರೂಪಿಸಲಾಗಿದ್ದು ಹೋರಾಟ ವಿಭಿನ್ನವಾಗಿರಲಿದೆ. ಎಲ್ಲ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆಂದೋಲನವನ್ನು ಯಶಸ್ವಿಗೊಳಿಸಬೇಕು ಎಂದರು.

ಸಭೆಯಲ್ಲಿ ಬಿಜೆಪಿ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಮುತ್ತಣ್ಣ ಬೆಣ್ಣೂರ, ಎಸ್.ಟಿ ಮೋರ್ಚಾ ಅಧ್ಯಕ್ಷ ತಿಪ್ಪಣ್ಣ ಸಂಜೀವಗೋಳ, ಯಲ್ಲಪ್ಪ ಬೆಂಡಿಗೇರಿ, ಶಿವಾನಂದ ಟವಳಿ ಸೇರಿದಂತೆ ಅನೇಕರು ಇದ್ದರು.

## ಫೆ.28 ಹುನಗುಂದ ತಾ.ಪಂ ಕೆಡಿಪಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25–ಹುನಗುಂದ ತಾಲೂಕ ಪಂಚಾಯತ್ 2ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು(ಕೆಡಿಪಿ) ಶಾಸಕ ವಿಜಯಾನಂದ ಕಾಶಪ್ಪನವರ ಅಧ್ಯಕ್ಷತೆಯಲ್ಲಿ ಫೆ.28 ರಂದು ಬೆಳಿಗ್ಗೆ 10 ಗಂಟೆಗೆ ಹುನಗುಂದ ಐಬಿ ಹತ್ತಿರವಿರುವ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಸಲಾಗುವುದು ಎಂದು ಹುನಗುಂದ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ಮಹಾರಾಷ್ಟ್ರ ಬಸ್ ತಡೆದು ಪ್ರತ್ಯುತ್ತರ ನೀಡಿದ ಕರವೇ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25– ಮಹಾರಾಷ್ಟ್ರದ ಸೋಲಾಪುರದಲ್ಲಿ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಚಾಲಕರ ಮೇಲೆ ಸೋಮವಾರ ಪುಂಡಾಟಿಕೆ ತೋರಿದವರಿಗೆ ಮಂಗಳವಾರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಬಾಗಲಕೋಟೆ ಜಿಲ್ಲೆಯಲ್ಲಿ ಪ್ರತ್ಯುತ್ತರ ನೀಡಿ ಎಚ್ಚರಿಸಿದರು.

ಜಿಲ್ಲೆಯ ಹುನಗುಂದ ತಾಲೂಕಿನ ಕೂಡಲಸಂಗಮ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಹಾರಾಷ್ಟ್ರ ಸಾರಿಗೆ ಸಂಸ್ಥೆಗೆ ಸೇರಿದ್ದ ಬಸ್ ತಡೆದ ಕರವೇ ಕಾರ್ಯಕರ್ತರು ಜೈ ಕರ್ನಾಟಕ ಎಂದು ಬರೆದರಲ್ಲದೇ, ಬಸ್ಸಿನ ಚಾಲಕ, ನಿರ್ವಾಹಕರಿಂದ ಜೈ ಕರ್ನಾಟಕ, ಜೈ ಕರವೇ, ಕರವೇ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತಿಗೆ ಜೈಕಾರ ಹಾಕಿಸಿದ್ದಾರೆ.

ಸೋಮವಾರ ಇಳಕಲ್ಲಿನಿಂದ ಸೋಲಾಪುರಕ್ಕೆ ತೆರಳಿದ್ದ ಬಸ್ ತಡೆದಿದ್ದ ಮರಾಠಿಗರು ಚಾಲಕ ಲಕ್ಷ್ಮಣ ಚಳಗೇರಿ ಅವರಿಗೆ ಕೇಸರಿ ಗುಲಾಲು ಎರಚಿ ಜೈ ಮಹಾರಾಷ್ಟ್ರ ಹೇಳಿಸಿದ್ದರು, ಅದಕ್ಕೆ ಪ್ರತಿಕಾರವಾಗಿ ಅದೇ ಡಿಪೋ ವ್ಯಾಪ್ತಿಯಲ್ಲಿ ಮಹಾರಾಷ್ಟ್ರದ ಬಸ್ ತಡೆದು ಕರವೇ ಕಾರ್ಯಕರ್ತರು ಜೈ ಕರ್ನಾಟಕ ಹೇಳಿಸುವ ಮೂಲಕ ಎಚ್ಚರಿಕೆ ನೀಡಿದ್ದಾರೆ.

## ಕಾನಿಪ ಸದಸ್ಯತ್ವ ನವೀಕರಣಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2025–26ನೇ ಸಾಲಿಗೆ ಸದಸ್ಯತ್ವ ನವೀಕರಣ ಮಾಡಲು ಮಾರ್ಚ 5 ರೊಳಗೆ ಅರ್ಜಿ ತುಂಬಿ ಕೊಡುವಂತೆ ಕಾರ್ಯನಿರತ ಪತ್ರಕರ್ತರ ಸಂಘದ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ಧಲಬಂಜನ, ಪ್ರಧಾನ ಕಾರ್ಯದರ್ಶಿ ಶಂಕರ ಕಲ್ಯಾಣಿ ತಿಳಿಸಿದ್ದಾರೆ. ಬುಧವಾರ ನಡೆದ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿದ್ದು, ಯಾವುದೇ ಹೊಸ ನಿಯಮಾವಳಿ ಇರುವುದಿಲ್ಲ. ಮಾರ್ಚ 10ರೊಳಗೆ ನವೀಕರಣಕ್ಕೆ ರಾಜ್ಯ ಘಟಕಕ್ಕೆ ಕಾರ್ಡ್ ಕಳುಹಿಸಬೇಕಿದ್ದು, ಎಲ್ಲ ಸದಸ್ಯರು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿದೆ.

ಅರ್ಜಿಯೊಂದಿಗೆ ಸದಸ್ಯರು ತಮ್ಮ ಸಂಪೂರ್ಣ ಮಾಹಿತಿ ಹಾಗೂ ಸರಿಯಾದ ವಿಳಾಸದೊಂದಿಗೆ ಇತ್ತೀಚಿನ ಭಾವಚಿತ್ರ ಹಾಗೂ ದಾಖಲೆಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ಅರ್ಜಿ ಶುಲ್ಕ 510 ರೂಪಾಯಿಗಳಾಗಿದ್ದು, ಸದಸ್ಯರು ಆಯಾ ತಾಲೂಕಾ ಘಟಕದ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಜಿಲ್ಲಾ ಮಟ್ಟದ ಪತ್ರಕರ್ತರು ಪತ್ರಿಕಾ ಭವನದ ವ್ಯವಸ್ಥಾಪಕ ಶಿವು ಗಾಣಿಗೇರ ಅವರಿಗೆ ಪೂರ್ಣ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಮಾತು, ಶ್ರವಣ ದೋಷದ ಬಗ್ಗೆ ನಿರ್ಲಕ್ಷ್ಯ ಬೇಡ: ಡಾ.ಭುವನೇಶ್ವರಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25– ಬಿ.ವ್ಹಿ.ವ್ಹಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯ ಇ.ಎನ್.ಟಿ ವಿಭಾಗದಲ್ಲಿ ಇತ್ತೀಚೆಗೆ 2 ದಿನದ ಉಚಿತ ಶ್ರವಣ ಮತ್ತು ಮಾತು ಪರಿಶೀಲನಾ ಶಿಬಿರ ಜರುಗಿತು. ಬಿ.ವ್ಹಿ.ವ್ಹಿ.ಎಸ್ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಮತ್ತು ಹಿಯರಿಂಗ್ ಮತ್ತು ಎಸ್.ಡಿ.ಎಂ ವೈದ್ಯಕೀಯ ವಿಜ್ಞಾನ ಕಾಲೇಜು ಮತ್ತು ಆಸ್ಪತ್ರೆ ಧಾರವಾಡ ಇವರ ಸಹಯೋಗದೊಂದಿಗೆ ನಡೆದ ಉಚಿತ ಶ್ರವಣ ಮತ್ತು ಮಾತು ಪರಿಶೀಲನಾ ಶಿಬಿರವನ್ನು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಉದ್ಘಾಟಿಸಿದರು. ಮಾತು ಮತ್ತು ಶ್ರವಣದ ಉಚಿತ ತಪಾಸಣಾ ಶಿಬಿರ ಏರ್ಪಡಿಸಿರುವುದು ನಗರ ಹಾಗೂ ಗ್ರಾಮೀಣ ಭಾಗದ ಜನರಿಗೆ ತುಂಬಾ ಸಹಕಾರಿಯಾಗಿದೆ. ಅತ್ಯಾಧುನಿಕ ಉಪಕರಣ, ನುರಿತ ಅನುಭವಿ ವೈದ್ಯರ ತಂಡ ಹೊಂದಿರುವ ಈ ಸುಸಜ್ಜಿತ ಆಸ್ಪತ್ರೆಯಲ್ಲಿ ಇಂತಹ ಶಿಬಿರಗಳು ಆಗಾಗ ಏರ್ಪಡುತ್ತವೆ ಎಂದು ಹೇಳಿದರು.



ಮೂಕತನ ಮತ್ತು ಕಿವುಡುತನದಿಂದ ಬಳಲುತ್ತಿರುವವರಿಗೆ ಉಚಿತ ಶ್ರವಣ ಮತ್ತು ಮಾತು ಪರಿಶೀಲನೆ(ಮಕ್ಕಳಿಗೆ,ಹಿರಿಯರಿಗೆ ಮತ್ತು ವಯಸ್ಕರರಿಗೆ),ಅನುಭವ ಸಂಪನ್ನ ಶ್ರವಣ ತಜ್ಞರು ಮತ್ತು ಭಾಷಾ ತಜ್ಞರಿಂದ ಸಮಾಲೋಚನೆ, ಭಾರತ ಸರ್ಕಾರದ ಎ.ಡಿ.ಐ.ಪಿ ಯೋಜನೆಯಡಿ ಶ್ರವಣೋಪಕರಣ ಪಡೆಯಲು ಅಗತ್ಯವಿರುವ ದಾಖಲೆಗಳನ್ನು ಕುರಿತು ಮಾರ್ಗದರ್ಶನ ಮತ್ತು ಪರಿಶೀಲನೆ. ಅರ್ಹ ವ್ಯಕ್ತಿಗಳನ್ನು ಮೌಲ್ಯಮಾಪನ ಆಧಾರದ ಮೇಲೆ ಆಯ್ಕೆ ಮಾಡಿ ಮತ್ತು ಸಮರ್ಪಕ ದಾಖಲೆಗಳನ್ನು ಸಲ್ಲಿಸಿ ಆಯ್ಕೆಯಾದವರಿಗೆ ಶ್ರವಣೋಪಕರಣ ವಿತರಿಸಲಾಗುವುದು ಎಂದು ಇ.ಎನ್.ಟಿ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್.ಹಿರೇಮಠ ಹೇಳಿದರು. ಶಿಬಿರದಲ್ಲಿ 100ಕ್ಕೂ ಹೆಚ್ಚು ಜನರಿಗೆ ಶ್ರವಣ ವಾಕ್ ಸಾಮರ್ಥ್ಯ ತಪಾಸಣೆಯನ್ನು ಉಚಿತವಾಗಿ ಮಾಡಲಾಯಿತು. ಎಸ್.ಡಿ.ಎಮ್.ಮೆಡಿಕಲ್ ಕಾಲೇಜಿನ ಡಾ.ಶ್ವೇತಾ ಸಿಂಪಿ ಮತ್ತು ಡಾ.ಶೆರಿನ್ ಹಾಗೂ ಕುಮಾರೇಶ್ವರ ಆಸ್ಪತ್ರೆಯ ಡಾ.ಸಿ.ಎಸ್.ಹಿರೇಮಠ, ಡಾ.ಎಸ್.ಎಸ್.ದೊಡ್ಡಮನಿ, ಡಾ.ಶಶಿಧರ ಸೂಲಿಗಾಂವಿ, ಡಾ.ಪ್ರಭು ಖವಾಸಿ, ಡಾ.ಮಲ್ಲಿಕಾರ್ಜುನ ಪಾಟೀಲ, ಡಾ.ಸಂತೋಷ ಮಾಳಶೆಟ್ಟಿ, ಡಾ.ಪವನ ಹೊಸಮನಿ, ಡಾ.ಅರ್ಚನಾ, ಡಾ.ಕ್ರಾಂತಿ,ಆಡಿಯೋಲಾಜಿಸ್ಟ್ ಡಾ.ಫಕೀರಯ್ಯಾ, ಡಾ.ಸುಶ್ಮಿತಾ, ಡಾ.ಸ್ನೇಹಾ ಹಿರೇಮಠ, ಇಯರ್ ಮೋಲ್ಡ್ ಟೆಕ್ನಿಶಿಯನ್ ನವೀನ ಹಿಬಾರೆ ಪಾಲ್ಗೊಂಡಿದ್ದರು.

## ಸಂವಿಧಾನವನ್ನು ಸಾಂಸ್ಕೃತಿಕ ಪಠ್ಯವಾಗಿ ಅರಿಯಬೇಕು: ಶ್ರೀಧರ ಬಳಿಗಾರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25–ಸಾಹಿತಿಗಳು ಪರಾವಲಂಬಿಗಳಾಗಬಾರದು, ಸಂವಿಧಾನವನ್ನು ರಾಜಕೀಯ ಪಠ್ಯವಾಗಿ ನೋಡದೆ ಸಾಂಸ್ಕೃತಿಕ ಪಠ್ಯವಾಗಿ ಅರಿಯಬೇಕಾಗಿದೆ ಎಂದು ಖ್ಯಾತ ಕಾದಂಬರಿಕಾರ ಶ್ರೀಧರ ಬಳಿಗಾರ ಹೇಳಿದರು.

ನವನಗರದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ಯಂಡಿಗೇರಿಯ ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನ ಹಮ್ಮಿಕೊಂಡ 2024ರ ರಾಜ್ಯ ಮಟ್ಟದ ತ್ರಿವೇಣಿ ಶೆಲ್ಲಿಕೇರಿ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಬಹುಮಾನ, ಪ್ರಶಸ್ತಿಗಳು ವ್ಯಕ್ತಿಗಲ್ಲ, ಅವನ ಕೃತಿಗೆ ನೀಡುವುದಾಗಿದೆ. ಸಾಂಪ್ರದಾಯಿಕವಾಗಿ ಕೃತಿಗಳು ಲೇಖಕರನ್ನು ರೂಪಿಸುತ್ತವೆ,



ಸಾಹಿತ್ಯ ಅನನ್ಯವಾದ ಸಂವೇದನೆ, ದಿನನಿತ್ಯ ಬಳಸುವ ಶಬ್ದಗಳನ್ನು, ಪದಗಳನ್ನು ಅನನ್ಯವಾದ ಅನುಭವವನ್ನು ಅಭಿವ್ಯಕ್ತಿ ಮಾಡಬೇಕಾಗುತ್ತದೆ ಎಂದು ಹೇಳಿದ ಶ್ರೀಧರ, ಓದುಗನಲ್ಲಿರುವ ಸಾಂಸ್ಕೃತಿಕ ಸ್ಮೃತಿಗಳನ್ನು ಜಾಗೃತಗೊಳಿಸಬೇಕು, ಬರವಣಿಗೆಯಲ್ಲಿ ಕಲಾತ್ಮಕತೆ ಅಗತ್ಯವಾಗಿದ್ದು, ಸಾಹಿತಿಗಳು ಪರಾವಲಂಬಿಯಾಗಬಾರದು ಮತ್ತು ಸಂವಿಧಾನವನ್ನು ರಾಜಕೀಯ ಪಠ್ಯವಾಗಿ ನೋಡದೆ ಸಾಂಸ್ಕೃತಿಕ ಪಠ್ಯವಾಗಿ ಅರಿಯಬೇಕು ಎಂದರು.

ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ವಿಷ್ಣುವರ್ಧನ ಸಸಿಗೆ ನೀರುಣಿಸಿ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿ, ನಾಡಿನ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಸಾಹಿತಿಗಳು ಚಿಂತನೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನ ಸಾಹಿತ್ಯ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಸಮಾಜಮುಖಿ ಕಾರ್ಯ ಶ್ಲಾಘನೀಯವಾಗಿದ್ದು, ಸಾಹಿತ್ಯ ಜನರನ್ನು ಸದಾ ಎಚ್ಚರಿಸುವ ಸಾಧನ. ಇಂದಿನ ಸಾಹಿತ್ಯದ ದಿಕ್ಕೂ ಎತ್ತ ಸಾಗಿದೆ ಎಂಬುದನ್ನು ಚಿಂತನೆ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಾನಕಿ ಕೆ.ಎಮ್ ಅವರು ಆನ್‌ಲೈನ್ ಸಂದೇಶದ ಮೂಲಕ ಸಮಾರಂಭದ ಯಶಸ್ವಿಗೆ ಶುಭ ಹಾರೈಸಿದರು. ಖ್ಯಾತ ವಿಮರ್ಶಕ ಎಸ್.ಆರ್.ವಿಜಯಶಂಕರ, ಕಾದಂಬರಿಗಳು ಜನರಿಗೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಕೊಡಬಹುದಾಗಿದೆ. ಪ್ರಜ್ಞಾವಂತ ಲೇಖಕರು ಸಾಮಾಜಿಕ ಸಮಸ್ಯೆಗಳನ್ನು ಹತ್ತಿರದಿಂದ ನೋಡಿ ಪ್ರಶ್ನಿಸುವುದು ಅಗತ್ಯವಾಗಿದೆ. ಪ್ರಶ್ನಿಸುವುದರಿಂದ ಸತ್ಯಾಸತ್ಯತೆಗಳನ್ನು ಜನರ ಮುಂದಿಡಲು ಸಹಾಯವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸಾಹಿತಿ ಕೆ.ಶಿವಮಳಗಿ ವಹಿಸಿದ್ದರು. ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಶೆಲ್ಲಿಕೇರಿ ಪ್ರಾಸ್ತಾವಿಕ ಮಾತನಾಡಿ ಪ್ರತಿಷ್ಠಾನದ ರೂಪರೇಶೆಗಳು ಹಾಗೂ ಮುಂದಿನ ಸಮಾಜಮುಖಿ ಸೇವೆಗಳ ಬಗ್ಗೆ ತಿಳಿಸಿದರು.

ಪ್ರಶಸ್ತಿಪ್ರದಾನ: ಗುರುಪ್ರಸಾದ್ ಕಂಟಲಗೆರೆ ಅವರ 'ಅಟ್ರಾಸಿಟಿ' ಕಾದಂಬರಿಗೆ, ಲಕ್ಷ್ಮಣ ಶರೆಗಾರ ಅವರ 'ತಿದಿಯ ತುದಿಗೆ ಬೆಂಕಿಯ ಉಗುಳು' ಕಥಾ ಸಂಕಲನಕ್ಕೆ, ಶಶಿ ತರೀಕೆರೆ ಅವರ 'ಪ್ಯೂಪಾ' ಕವನ ಸಂಕಲನಕ್ಕೆ 2024 ರ ರಾಜ್ಯ ಮಟ್ಟದ ತ್ರಿವೇಣಿ ಶೆಲ್ಲಿಕೇರಿ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೇದಿಕೆ ಮೇಲೆ ಪ್ರತಿಷ್ಠಾನದ ಗೌರವಾಧ್ಯಕ್ಷ ಎಚ್.ಪಿ.ಶೆಲ್ಲಿಕೇರಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಸೇರಿದಂತೆ ಅನೇಕರು ಇದ್ದರು.

ಸಂಗಮೇಶ ಪಾನಶೆಟ್ಟಿ ಪ್ರಾರ್ಥಿಸಿದರು, ಡಾ.ಚಂದ್ರಶೇಖರ ಕಾಳನ್ನವರ ಸ್ವಾಗತಿಸಿದರು, ಶಿವಾನಂದ ಶೆಲ್ಲಿಕೇರಿ ವಂದಿಸಿದರು. ಗುರು ಗಾಣಿಗೇರ ಕಾರ್ಯಕ್ರಮ ನಿರೂಪಿಸಿದರು.

# ಮೆಡಿಕಲ್ ಕಾಲೇಜಿನ ಶಿವಾಲಯದಲ್ಲಿ ಇಂದು 'ಮಹಾಶಿವರಾತ್ರಿ'

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.25– ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯ ಆವರಣದಲ್ಲಿರುವ ಶಿವಾಲಯದಲ್ಲಿ ಫೆ.26 ರಂದು ಮಹಾಶಿವರಾತ್ರಿ ಕಾರ್ಯಕ್ರಮ ಜರುಗಲಿದೆ.

ಎಸ್.ಎನ್.ವೈದ್ಯಕೀಯ ಮಹಾವಿದ್ಯಾಲಯ, ಪಿ.ಎಮ್.ಎನ್.ಎಮ್ ದಂತ ಕಾಲೇಜು, ಸಜ್ಜಲಶ್ರೀ ನರ್ಸಿಂಗ್ ಕಾಲೇಜು, ಫಿಜಿಯೋಥೆರಪಿ ಕಾಲೇಜು ಹಾಗೂ ಬಿ.ವಿ.ವಿ ಸಂಘದ ಡಾ.ಪುಟ್ಟರಾಜಗವಾಯಿ ಸ್ಕೂಲ್ ಆಫ್ ಮ್ಯೂಜಿಕ್ ಇವುಗಳ ಸಹಯೋಗದೊಂದಿಗೆ ಬುಧವಾರ ಮಹಾಶಿವರಾತ್ರಿ ಹಬ್ಬವು ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರುಗಲಿದೆ.

ಬೆಳಿಗ್ಗೆ 5 ಗಂಟೆಗೆ ಶಿವಲಿಂಗಕ್ಕೆ ರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ, ಮುಂಜಾನೆ 11 ಗಂಟೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ಅಕ್ಕನ ಬಳಗದ ಸದಸ್ಯೆಯರಿಂದ ಶ್ರೀರುದ್ರ ಪಾರಾಯಣ ನಡೆಯಲಿದೆ. ಸಂಜೆ 6 ಗಂಟೆಗೆ ಪ್ರಸಾದ ವಿತರಣೆ ಜರುಗಲಿದೆ.

ಸಂಜೆ 6.30 ರಿಂದ ನಡೆಯಲಿರುವ ಸಂಗೀತ ಶಿವರಾತ್ರಿ ಕಾರ್ಯಕ್ರಮದಲ್ಲಿ ಬಿ.ವಿ.ವಿ.ಸಂಘದ ಡಾ.ಪುಟ್ಟರಾಜ ಗವಾಯಿ ಸ್ಕೂಲ್ ಆಫ್ ಮ್ಯೂಜಿಕ್‌ನ ಸಂಚಾಲಕರಾದ ಡಾ.ಸಿದ್ದರಾಮಯ್ಯ ಮಠಪತಿ (ಗೊರಟಾ) ಅವರಿಂದ ನಾದ ವೈಭವ ನಡೆಯಲಿದೆ.

ಬಸವೇಶ್ವರ ಕಲಾ ಕಾಲೇಜಿನ ಸಂಗೀತ ವಿಭಾಗದ ಮುಖ್ಯಸ್ಥ ಡಾ.ಕಾಶಿಲಿಂಗ ಮಠ ಅವರಿಂದ ಸಿತಾರ ವಾದನ ಕೇಳಿಬರಲಿದ್ದು, ಡಾ.ರೇವಣಸಿದ್ದೇಶ ಎಮ್.ಬೆಣ್ಣೂರ ತಬಲಾ ಸಾಥ್ ನೀಡಲಿದ್ದಾರೆ. ಮೆಡಿಕಲ್ ಕಾಲೇಜಿನ ಡಾ.ಎಸ್.ಎಸ್.ದೊಡಮನಿ ಅವರಿಂದ ವಚನ ಗಾಯನ, ಡಾ.ಅಶ್ವಿನಿ ಮುತಾಲಿಕ್ ಮತ್ತು ತಂಡದಿಂದ ಭಕ್ತಿಸಂಗೀತ, ಯುವಕಲಾವಿದೆ ಅದಿತಿ ಖಂಡೆಗಳ ಮತ್ತು ಫಿಜಿಯೋಥೆರಪಿ ಕಾಲೇಜಿನ ಅರ್ಪಿತಾ ಮತ್ತು ಬಸವಜ್ಯೋತಿ ಇವರಿಂದ ಸಂಗೀತ ಕಾರ್ಯಕ್ರಮ, ಬಸವೇಶ್ವರ ಇಂಜಿನೀಯರಿಂಗ್ ಕಾಲೇಜಿನ ಬಿ.ಇ.ಸಿ ಸ್ವರಗಳು ತಂಡದಿಂದ ಭಕ್ತಿಸಂಗಮ ಕಾರ್ಯಕ್ರಮ, ದಂತ ಕಾಲೇಜಿನ ಡಾ.ರಶ್ಮಿ ಚೌರ, ಡಾ.ಹಿರಣ್ಮಯಿ ಬ್ರಿಡ್ ಮತ್ತು ತಂಡದವರಿಂದ ಸಂಗೀತ ಮತ್ತು ಭರತ ನಾಟ್ಯ ಕಾರ್ಯಕ್ರಮ ಜರುಗಲಿವೆ.

ಬಾಗಲಕೋಟೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದವರಿಂದ ಚೈತನ್ಯದೇವಗಳ, ಶಿವಶಂಕರ ಹಾಗೂ ಶಿವಶರಣೆಯರ ಮಂಟಪ ಪ್ರದರ್ಶನ ಮತ್ತು 108 ಶಿವಲಿಂಗಗಳ ದರ್ಶನವನ್ನು ಆಯೋಜಿಸಲಾಗಿದೆ.

ಈ ಭಕ್ತಿಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಅಶೋಕ.ಎಮ್.ಸಜ್ಜನ (ಬೇವೂರ) ಮತ್ತು ಮೆಡಿಕಲ್ ಕಾಲೇಜಿನ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಸ್ವಾಗತ ಕೋರಿದ್ದಾರೆ.

## ನಿವೃತ್ತ ಸರಕಾರಿ ನೌಕರರಿಗೆ ಪ್ರಶಸ್ತಿ ಪ್ರಧಾನ

ಹುಮನಾಬಾದ:ಫೆ.25:ಕರ್ನಾಟಕ ರಾಜ್ಯ ನಿವೃತ್ತ ಸರಕಾರಿ ನೌಕರರ ಸಂಘ ಹುಮನಾಬಾದ ತಾಲೂಕಾ ಘಟಕದ ವತಿಯಿಂದ ಇದೇ ತಿಂಗಳ ಅಂದರೆ 28 ಫೆಬ್ರುವರಿ ಮುಂಜಾನೆ 11 ಗಂಟೆಗೆ ಸರಕಾರಿ ನೌಕರರ ಭವನದಲ್ಲಿ 80 ವಸಂತ ಪೂರೈಸಿದ ಹುಮನಾಬಾದ ತಾಲೂಕಿನ 25 ಜನ ನಿವೃತ್ತ ಸರಕಾರಿ ನೌಕರರಿಗೆ, ಪ್ರಶಸ್ತಿ ಪ್ರಧಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಸರಕಾರಿ ನೌಕರರ ತಾಲೂಕಾ ಅಧ್ಯಕ್ಷರಾದ ಶ್ರೀ ರಾಜಣ್ಣಾ. ಭಿ. ಹುಡಗಿಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಇಂದಿನ ಈ ಕಲುಷಿತ ವಾತಾವರಣದಲ್ಲಿ, ಕಲಿಷಿತ ಆಹಾರ,ನೀರು,ಗಾಳಿಸೇವಿಸುತ್ತಾ 60ವರ್ಷ ಬದುಕುಳಿಯುವುದೇ ಒಂದು ದೊಡ್ಡ ಸಾಧನೆ ಮಾಡಿದಂತಾಗುತ್ತಿದೆ. ಇಂತಹದರಲ್ಲಿ ನಮ್ಮ ಸಂಘದಲ್ಲಿರುವ ಸದಸ್ಯರು ಸರಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ 80 ವಸಂತಗಳನ್ನು ಪೂರೈಸಿದ ಹಿರಿಯ ಜೀವಿಗಳಿಗೆ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಹುಮನಾಬಾದ ತಾಲೂಕಿನ ಎಲ್ಲಾ ಸರಕಾರಿ ನಿವೃತ್ತ ನೌಕರರು ಭಾಗವಹಿಸಿ 80 ವರ್ಷದ ಹಿರಿಯ ಜೀವಿಗಳಿಗೆ ಶತಾಯುಷಿಗಳಾಗುವಂತೆ ಆಶೀರ್ವದಿಸಬೇಕೆಂದು ಎಲ್ಲರಿಗೂ ಆಹ್ವಾನಿಸಿದ್ದಾರೆ.

# ಮಠಾಧೀಶರಿಂದ ಸಮಾಜದಲ್ಲಿ ಶಾಂತಿನೆಲೆ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಫೆ.25:ಮಠಾಧೀಶರು ಕೈಗೊಳ್ಳುವಒಳ್ಳೆಯಕಾರ್ಯಗಳಿಂದ ಸಮಾಜದಲ್ಲಿ ಶಾಂತಿ,ನೆಮ್ಮದಿ ನೆಲೆಸಿದೆ ಎಂದು ನಾರಂಜಾ ಸಹಕಾರಿ ಸಕ್ಕರೆ ಕಾರಖಾನೆ ಅಧ್ಯಕ್ಷಡಿ.ಕೆ.ಸಿದ್ರಾಮ ಹೇಳಿದರು.

ತಾಲೂಕಿನ ಭಾತಂಬ್ರಾ ಗ್ರಾಮದ ಜಗದ್ಗುರು ನಿರಂಜನ ಸಂಸ್ಥಾನ ಮಠದಲ್ಲಿ ಹಾನಗಲ್ ಗುರುಕುಮಾರ ಮಹಾಶಿವಯೋಗಿಗಳ95ನೆಯ ಪುಣ್ಯಸ್ಮರಣೆ ಮತ್ತು ನಮ್ಮೂರ ಹಬ್ಬ–2025ನಿಮಿತ್ತಸೋಮವಾರ ಆಯೋಜಿಸಿದ್ದಪ್ರವಚನಮಂಗಲ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರ,ಗೌತಮಬದ್ಧರ ಮಾರ್ಗವನ್ನುಮಠಾಧೀಶರು ಅನುಸರಿಸುತ್ತಿದ್ದಾರೆ.ಆ ಕಾರಣ–ಕ್ಕಾಗಿಯೇ ಎಲ್ಲರೂ ಸಂತೃಪ್ತ ಬದುಕು ಸಾಗಿಸುವಂತಾಗಿದೆ.

ಸಮಾಜದಲ್ಲಿ ಕಾಲಕಾಲಕ್ಕೆ ಮಠಾಧೀಶರುತಮ್ಮಬೋಧನೆ, ಉಪದೇಶದಮೂಲಕಭಕ್ತರನ್ನು ಸರಿದಾರಿಗೆ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ.

ಅಂತಹ ಮಠಾಧೀಶರ ಮಧ್ಯೆ ನಾವೆಲ್ಲರೂ ಬದುಕು ಸಾಗಿಸುತ್ತಿರುವುದುನಮ್ಮಪುಣ್ಯವೆಂದು ಭಾವಿಸಿದ್ದೇನೆ ಎಂದರು.

ಪ್ರತಿಯೊಬ್ಬರುಬಸವಾದಿಶರಣರ ತತ್ವಗಳನ್ನುತಿಳಿದುಕೊಳ್ಳಬೇಕು. ಮಠಾಧೀಶರ ಪ್ರವಚನ, ಬೋಧನೆ, ಉಪದೇಶ ಆಲಿಸಿ ಸಾರ್ಥಕಬದುಕು ಸಾಗಿಸಬೇಕು ಎಂದು ತಿಳಿಸಿದರು.ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ದಿವ್ಯಸಾನ್ನಿಧ್ಯವಹಿಸಿ ಮಾತನಾಡಿ,ಹಾನಗಲ್ ಕುಮಾರ ಶಿವಯೋಗಿಗಳು ಹಾನಗಲ್ ಕುಮಾರ ಶಿವಯೋಗಿಗಳು ಶಿವಯೋಗಮಂದಿರದಲ್ಲಿ ಸಮಾಜ ಸುಧಾರಣೆಗಾಗಿಗೆ ಉತ್ತಮ ವಟುಗಳನ್ನು ನಿರ್ಮಾಣಗೊಳಿಸಲು ಸಾಕಷ್ಟು ಶ್ರಮಿಸಿದ ಫಲವಾಗಿ ಇಂದು ನಾಡಿನಾದ್ಯಂತ ಸಮಾಜ ಸುಧಾರಣೆಗಾಗಿ ಸ್ವಾಮಿಗಳು ಹೊಂದುವಂತಾಗಿದೆ ಎಂದು ತಿಳಿಸಿದರು.ರಾಜ್ಯ ಮಕ್ಕಳ

ಬದುಕು ಮೂರು ದಿನದ ಸಂತೆ ಇದ್ದಂತೆ ಇರುವ ವರೆಗೂ ಕಾಯಕ ದಾಸೋಹ ಸಿದ್ಧಾಂತ ಮೈಗೂಡಿಸಿಕೊಂಡು ಸಮೃದ್ಧ ಬದುಕು ಸಾಗಿಸಬೇಕು.

**– ಡಿ.ಕೆ.ಸಿದ್ರಾಮ ಅಧ್ಯಕ್ಷರು ನಾರಂಜಾ ಸಕ್ಕರೆ ಕಾರಖಾನೆ**

ಪಾಲಕರು ತಮಗೆ ಎಷ್ಟೇ ಒತ್ತಡ ಇದ್ದರೂ ಕೂಡ ಮಕ್ಕಳ ಬೆಳವಣಿಗೆ ದೃಷ್ಟಿಯಿಂದ ಸಮಯ ಮೀಸಲಿಟ್ಟು ಉತ್ತಮ ಶಿಕ್ಷಣ, ಸಂಸ್ಕಾರ ಕಲ್ಪಿಸಬೇಕು.

**–ಶಶಿಧರ ಕೋಸಂಬೆ ಸದಸ್ಯರು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು**

ಹಾನಗಲ್ ಗುರುಕುಮಾರ ಮಹಾಶಿವಯೋಗಿಗಳು ನಾಡಿಗೆ ನೀಡಿರುವ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ ಪ್ರತಿವರ್ಷ ಅವರ ಪುಣ್ಯಸ್ಮರಣೆ ನಡೆಸಿಕೊಂಡು ಬರಲಾಗುತ್ತಿದೆ.

**– ಶಿವಯೋಗೀಶ್ವರ ಸ್ವಾಮೀಜಿ ಜಗದ್ಗುರು ನಿರಂಜನ ಸಂಸ್ಥಾನ ಮಠ ಭಾತಂಬ್ರಾ**

**ಇಷ್ಟಲಿಂಗ ಪೂಜೆ ಇಂದು**

ಶ್ರೀಮಠದ ಆವರಣದಲ್ಲಿ ಬುಧವಾರ ಬೆಳಿಗ್ಗೆ 10ಗಂಟೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಲಿದೆ. ಸಾಯಂಕಾಲ 4ಕ್ಕೆ ಪಲ್ಲಕ್ಕಿ ಮೆರವಣಿಗೆ ನಡೆಯಲಿದ್ದು, ಉದ್ಯಮಿ ಸೋಮನಾಥಪ್ಪ ಅಷ್ಟೂರೆ ಚಾಲನೆ ನೀಡಲಿದ್ದಾರೆ. 5 ಗಂಟೆಗೆ ರಥೋತ್ಸವಕ್ಕೆ ಮಹಿಳಾ ಪೀಠಾಧ್ಯಕ್ಷೆ ಬಸವಾಂಜಲಿ ತಾಯಿ ಚಾಲನೆ ನೀಡಲಿದ್ದಾರೆ.

ಸಾಯಂಕಾಲ 6 ಗಂಟೆಗೆ ಸಮಾರೋಪ, ಗುರುವಂದನೆ ಮತ್ತು ಶಿವಯೋಗೀಶ್ವರ ಸ್ವಾಮೀಜಿ ಅವರ 80ನೆಯ ಜನ್ಮದಿನ ಕಾರ್ಯಕ್ರಮ ನಡೆಯಲಿದ್ದು, ಹಲಬರ್ಗಾ ಶರಣಗಿರಿ ಮಹಿಳಾ ಪೀಠಾಧ್ಯಕ್ಷೆ ಮಾತೆ ಬಸವಾಂಜಲಿ ತಾಯಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಂಥ ಬಿಡುಗಡೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಗುತ್ತದೆ.ಜತೆಗೆ ವಿವಿಧ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಮಾತನಾಡಿದರು.ಬಸವಕಲ್ಯಾಣ ಹರಳಯ್ಯನವರ ಗವಿಪೀಠದ ಅಧ್ಯಕ್ಷೆ ಡಾ.ಗಂಗಾಂಬಿಕೆ ಅಕ್ಕ ನೇತೃತ್ವವಹಿಸಿ ಮಾತನಾಡಿದರು.


ಶೀಲವಂತೇಶ್ವರ ಶಿವಾಚಾರ್ಯ, ಗಿರಿಮಲ್ಲೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಭಾಲ್ಕಿ ಪಿಕೆಪಿಎಸ್ ಅಧ್ಯಕ್ಷ ಕಪಿಲ್ ಕಲ್ಯಾಣೆ, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ ಸೇರಿದಂತೆ ಹಲವರು ಇದ್ದರು. ಶ್ರೀಕಾಂತ ಭೂರಾಳೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.



ಕಮಲನಗರ:ಇತ್ತೀಚಿಗೆ ಕಮಲನಗರ ಪಟ್ಟಣದ ಶಾಲಿವಾನ್ ಶಾಮರಾವ ರಾಮಲೆ ಅವರ ಮನೆಗೆ ಶಾರ್ಟ್ ಸರ್ಕಟ್ ನಿಂದ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಹೋಗಿತ್ತು, ಇಂದು ಸಂಸದರಾದ ಶ್ರೀ ಸಾಗರ ಖಂಡ್ರೆ ಅವರು ಸ್ಥಳಕ್ಕೆ ಭೇಟಿ ನೀಡಿ ಹಾನಿಯನ್ನು ಪರಿಶೀಲಿಸಿ, ಸೂಕ್ತ ಪರಿಹಾರ ಒದಗಿಸುವ ಭರವಸೆ ನೀಡಿದರು.ಈ ಸಂದರ್ಭದಲ್ಲಿ ಮುಖಂಡರಾದ ಪ್ರವೀಣ ಪಾಟೀಲ, ಗ್ರಾಮ ಪಂಚಾಯತ ಸದಸ್ಯರಾದ ಸಂತೋಷ ಬಿರಾದಾರ, ಸಾಯಿನಾಥ ಕಾಂಬಳೆ ಸೇರಿದಂತೆ ಇನ್ನಿತರ ಇದ್ದರು.



ಬಸವಕಲ್ಯಾಣ :– ಇಲ್ಲಿನ ಅನುಭವ ಮಂಟಪಕ್ಕೆ ರವಿವಾರ ಭೇಟಿ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ. ಎಚ್. ಸಿ. ಮಹಾದೇವಪ್ಪ ಅವರನ್ನು ಭಾಲ್ಕಿ ಸಂಸ್ಥಾನ ಹಿರೇಮಠದ ಪೂಜ್ಯಶ್ರೀ ಗುರುಬಸವ ಪಟ್ಟದ್ದೇವರು ಸನ್ಮಾನಿಸಿದ್ದರು. ಈ ಸಂದರ್ಭದಲ್ಲಿ ಸಚಿವರಾದ ರಹೀಮ್ ಖಾನ. ಸಂಸದರಾದ ಸಾಗರ ಖಂಡ್ರೆ. ಮಾಜಿ ಸಚಿವರಾದ ರಾಜಶೇಖರ ಪಾಟೀಲ ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಶಿವರಾಜ ನರಶೆಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ ಹುಲಸೂರು ತಾಲೂಕಿನ ಬೇಲೂರು ಗ್ರಾಮದಲ್ಲಿ ಉರಲಿಂಗಪೆದ್ದಿ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ ಪ್ರಥಮ ಸರ್ವೋದಯ ಸಾಹಿತ್ಯ ಸಮ್ಮೇಳನವು ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಸರ್ವಾಧ್ಯಕ್ಷತೆಯಲ್ಲಿ "ಸಮಾರೋಪ ಸಮಾರಂಭ" ಜರುಗಿತು. ಈ ಸಂದರ್ಭದಲ್ಲಿ ಉರಿಲಿಂಗಪೆದ್ದಿ ಮಠದ ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮೀಜಿಗಳ. ತಿಪುರಾಂತಿನ ಪೂಜ್ಯ ಶ್ರೀ ಡಾ. ಗಂಗಾಂಬಿಕಾ ಅಕ್ಕ. ಸಂಸದರಾದ ಸಾಗರ ಖಂಡ್ರೆ. ರವಿ ಗುಗೆ. ಸುರೇಶ ಕಾನೇಕರ. ಜಗನ್ನಾಥ ಚಿಲ್ಲಾಬಟೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರೇವಪ್ಪಯ್ಯಾ ಅಪ್ಪನವರ 23ನೇ ಜಾತ್ರೆಯ ಅದ್ಧೂರಿ ರಥೋತ್ಸವ



ಮಲ್ಲಮ್ಮ ನುಡಿ ವಾರ್ತೆ


ಕಮಲನಗರ:ಫೆ.25:ತಾಲೂಕಿನ ಖತಗಾಂವ ಗ್ರಾಮದಲ್ಲಿ ಶರಣ ಮಹಾಸದ್ಗುರು ಮಹಾತ್ಮಾ ರೇವಪ್ಪಯ್ಯಾ ಶಿವಯೋಗಿ ಅಪ್ಪರವರ 23ನೇ ಜಾತ್ರಾ ಮಹೋತ್ಸವದ ನಿಮಿತ್ಯ ಸೋಮವಾರ ಸಾಯಂಕಾಲ ರಥೋತ್ಸವಕ್ಕೆಹಾವಗೀಲಿಂಗೇಶ್ವರ ಶಿವಾಚಾರ್ಯ,ಉಷಾ ವಸಂತ ಬಿರಾದಾರ ಚಾಲನೆ ನೀಡಿದರು.

ಹಾವಗೀಲಿಂಗೇಶ್ವರ ಶಿವಾಚಾರ್ಯ ಮಾತನಾಡಿ, ಅಜ್ಞಾನದ ಆವರಣದಿಂದ ತಪ್ಪು ಮಾಡುವ ಮನುಷ್ಯನು ಗುರು ಮಾರ್ಗದರ್ಶನದಿಂದ ಜ್ಞಾನ ಪಡೆದರೆ ಮುಕ್ತಿ ಸಾಧ್ಯ. ಅವಿದ್ಯ ಮೃತ್ಯುವಿಗೆ ಸಮಾನ, ವಿದ್ಯ ಅಮೃತಕ್ಕೆ ಸಮ. ವಿದ್ಯ ಎನ್ನುವ ಜ್ಞಾನ ಮಾರ್ಗದಲ್ಲಿ ನಡೆದು ಸದ್ಗುರುವಿನ ಮಾರ್ಗದರ್ಶನದಿಂದ ಜೀವನದಲ್ಲಿ ಸುಖ, ಶಾಂತಿ ಕಂಡುಕೊಳ್ಳಬಹುದು ಎಂದು ಹೇಳಿದರು.ಧರ್ಮದ ಆಚರಣೆ, ತತ್ವಗಳು ಮನುಷ್ಯರನ್ನು ಸನ್ಮಾರ್ಗದಲ್ಲಿ ನಡೆಸುತ್ತವೆ. ಗ್ರಾಮದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮ, ಜಾತ್ರೆಗಳು ಸಮಾಜದಲ್ಲಿ ವಿವಿಧ ಜನರ ಮಧ್ಯೆ ಬಾಂಧವ್ಯ ಬೆಳೆಸುತ್ತವೆ ಎಂದರು.

ಸಾಯಂಕಾಲ 6 ಗಂಟೆಗೆ ರೇವಪ್ಪಯ್ಯಾ ಶಿವಯೋಗಿ ಅಪ್ಪರವರ ರಥಕ್ಕೆ ಪೂಜೆ ಸಲ್ಲಿಸಿ ಭಕ್ತರು ಅಪ್ಪರವರ ಜಯಘೋಷ ಹಾಕಿದರು. ಅಪೇಕ್ಸ್ ಬ್ಯಾಂಕಿನ ನಿರ್ದೇಶಕ ಉಮಾಕಾಂತ ನಾಗಮಾರಪಳ್ಳಿ ನೂತನ ರಥ ಸಮರ್ಪಣೆ ಮಾಡಿದ್ದಾರೆ ಎಂದು ಗ್ರಾಮದ ಸಂಗಮೇಶ ಧರಣೆ ತಿಳಿಸಿದ್ದಾರೆ.

ಗ್ರಾಮದ ಮಹಿಳೆಯರಿಂದ ಭಜನೆ ಕಾರ್ಯಕ್ರಮ ಜರುಗಿ–ತು. ಭಕ್ತರು ರೇವಪ್ಪಯ್ಯಾ ಅಪ್ಪನವರ ದರ್ಶನ ಪಡೆದು ಪುನೀತರಾದರು.ಬಂದ ಭಕ್ತರಿಗೆ ಶಾಸಕ ಪ್ರಭು ಚವ್ಹಾಣ ಅವರಿಂದ ಮಾಹಾಪ್ರಸಾದದ ವ್ಯವಸ್ಥೆ ಜರುಗಿತು. ಉಷಾ ವಸಂತ ಬಿರಾದಾರ,ಶಿವಮೂರ್ತಿ ಸ್ವಾಮಿ, ಸಿದ್ದಯ್ಯಾ ಸ್ವಾಮಿ ರಂಡ್ಯಾಳ, ಗ್ರಾ.ಪಂ. ಸದಸ್ಯ ರಾಜಶೇಖರ ಪಾಟೀಲ್, ಪಿಕೆಪಿಎಸ್ ಅಧ್ಯಕ್ಷ ದಿಗಂಬರ ಬಿರಾದಾರ, ಬಸ್ವ–ರಾಜ ಧರಣೆ, ಚಂದ್ರಕಾಂತ ಧರಣೆ,ಬಸ್ವರಾಜ ಮಂಠೋಳೆ, ಕಾಶಿನಾಥ ಧರಣೆ,ಸಂಗಮೇಶ ಧರಣೆ, ಬಾಲಾಜಿ ಧರಣೆ, ಮಹೇಶ ಪಾಟೀಲ್,ಉಮೇಶ ಗೋನ್ನಾಳೆ,ರಮೇಶ ಪಾಟೀಲ್, ಶಿವಕುಮಾರ,ಧನರಾಜ ಧರಣೆ, ಪರಮೇಶ ಪಾಟೀಲ್, ಗಿರಿ ನೀಲಂಗೆ,ಅಮರ ಪಾಟೀಲ್, ಬಂಡೇಪ್ಪಾ ಬಿರಾದಾರ ಹಾಗೂ ಗ್ರಾಮದ ಸಕಲ ಸದ್ಭಕ್ತರು ಪಾಲ್ಗೊಂಡಿದ್ದರು.

## ಸಾಮೂಹಿಕ ಇಷ್ಟಲಿಂಗ ಪೂಜೆ ಇಂದು





ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಫೆ.25: ಇಲ್ಲಿಯ ಕುಂಬಾರಗುಂಡಯ್ಯ ಕಲ್ಯಾಣ ಮಂಟಪದಲ್ಲಿ ಮಹಾಶಿವರಾತ್ರಿ ನಿಮಿತ್ತ ಹಿರೇಮಠ ಸಂಸ್ಥಾನದ ವತಿಯಿಂದ ಬುಧವಾರ ಮಧ್ಯಾಹ್ನ 2 ಗಂಟೆಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮತ್ತು ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಲಿದೆ. ಸಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪೂಜೆ ಸಾಮಾಗ್ರಿಯೊಂದಿಗೆ ಭಾಗವಹಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

## ಶಶಿಧರ್ ಕೋಸಂಬೆ ಆಯೋಗದ ಸದಸ್ಯರ ಪ್ರವಾಸ

ಕಲಬುರಗಿ:ಫೆ.25:ಆಯೋಗದ ಸದಸ್ಯರಾದ ಶ್ರೀ ಶಿಶಿಧರ್ ಕೋಸಂಬೆ ಅವರು ಬೀದರ, ಕಲಬುರ್ಗಿ ಮತ್ತು ಬೆಳಗಾವಿ ಆಗಮಿಸುತ್ತಿದ್ದಾರೆ. ಫೆಬ್ರುವರಿ 26 ರಂದು ಬಾಲ್ಕಿಯಿಂದ ಬೀದರ ಪ್ರಯಾಣ ಮಾಡಿ ವಾಸ್ತವ್ಯ ಮಾಡುವರು. ಫೆಬ್ರುವರಿ 27 ರಂದು ಬೆಳಿಗ್ಗೆ 9 ಗಂಟೆಗೆ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರದ ಮತ್ತು ಸರ್ಕಾರಿ ವೀಕ್ಷಣಾಲಯಕ್ಕೆ ಭೇಟಿ ಮತ್ತು ಪರಿಶೀಲನೆ ನಡೆಸುವರು. ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯಲ್ಲಿ ಮಕ್ಕಳ ಸಹಾಯವಾಣಿಯ ಸಿಬ್ಬಂದಿಗಳೊಂದಿಗೆ ಸಭೆ.ಮಧ್ಯಾಹ್ನ 3 ಗಂಟೆಗೆ ಬೀದರ್‌ನಿಂದ ಕಲಬುರಗಿಗೆ ಪ್ರಯಾಣಿಸಿ ವಾಸ್ತವ್ಯ ಮಾಡುವರು. ಫೆಬ್ರುವರಿ 28 ರಂದು ಭೆಳಿಗ್ಗೆ 10.30 ರಿಂದ ಕಲಬುರಗಿ ವಿಭಾಗ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುವರು

## ಜ್ಞಾನವೇ ವಿಶ್ವದ ಸೊಬಗು:ಹಾರಕೂಡ ಶ್ರೀ

ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ :– ಫೆ 24. ಜ್ಞಾನ ಜಡವಲ್ಲ ಅದು ಯಾವತ್ತೂ ಚೈತನ್ಯಶೀಲವಾಗಿದ್ದು ವಿಶ್ವದ ಸೊಬಗನ್ನು ವೃದ್ಧಿಸುತ್ತಿರುತ್ತದೆ ಎಂದು ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಯದಲಾಪುರ ಗ್ರಾಮದಲ್ಲಿ ಆಯೋಜಿಸಿದ ಅಖಂಡ ಹರಿನಾಮ ಸಪ್ತಾಹ ಹಾಗೂ ಜ್ಞಾನೇಶ್ವರ ಪಾರಾಯಣ ಸಮಾರಂಭದ ಪಾವನ ಸನ್ನಿಧಾನ ವಹಿಸಿ ಮಾತನಾಡಿದ ಶ್ರೀಗಳು ಸುಜ್ಞಾನಿಯಾದವನು ಸಮಾಜಕ್ಕೆ ನಿರಂತರವಾಗಿ ಸುವಿಚಾರ ಧಾರೆಯನ್ನು ಹರಿಸುತ್ತಿರುತ್ತಾನೆ.

ಜ್ಞಾನ ಮತ್ತು ಜ್ಞಾನಿಗೆ ಯಾವತ್ತು ಮನ್ನಣೆ ದೊರಕುತ್ತಿರುತ್ತದೆ.

ಹರಿನಾಮ ಸಪ್ತಾಹ ಹಾಗೂ ಜ್ಞಾನೇಶ್ವರ ಪಾರಾಯಣ ಎಂದರೆ ಅದು ಅಧ್ಯಾತ್ಮದ ಪ್ರವಾಹವೇ ಆಗಿದೆ.

ಹರಿನಾಮ ಸ್ಮರಣೆಯಿಂದ ನಮ್ಮಲ್ಲಿ ದೈವಿಕ ಭಾವ ಉಂಟಾಗಿ ಮನಸುದ್ಧಿಗೊಂಡು ಪೂರ್ಣತೆ–ಯ ಕಡೆಗೆ ಪಯಣಿಸಲು ಅಣಿ ಗೊಳ್ಳುತ್ತೇವೆ.

ಸಂತಜ್ಞಾನೇಶ್ವರ ಮಹಾರಾಜರು ಚಿಕ್ಕವಯಸ್ಸಿನಲ್ಲಿಯೇ ಅದ್ಭುತ ದೈವ ಸಾಧನೆ ಮಾಡಿರುವ ಅಪರೂಪದ ಶ್ರೇಷ್ಠ ವ್ಯಕ್ತಿತ್ವ ಉಳ್ಳವರಾಗಿದ್ದಾರೆ.

ಅವರ ಜೀವನಾದರ್ಶನ ಸಾರ್ವಕಾಲಿಕ ಪ್ರೇರಣದಾಯಕವಾಗಿದ್ದು ಅವರು ತೋರಿದ ಮಾರ್ಗದಲ್ಲಿ ನಡೆದರೆ ಬದುಕು ಧನ್ಯತೆಯಿಂದ ಕೂಡಿರುತ್ತದೆ.

ಯದಲಾಪುರ ಗ್ರಾಮದ ಜನತೆ ಪ್ರತಿ ವರ್ಷ ಆಯೋಜಿಸುವ ಈ ಧರ್ಮ ಸತ್ಕಾರ್ಯದಿಂದಾಗಿ ಊರಿನ ಸಿರಿ ಸಂಪದ ಸಮೃದ್ಧಿಯಿಂದ ಕೂಡಿರುತ್ತದೆ.

ಹಾರಕೂಡ ಲಿಂ. ಚನ್ನಬಸವ ಶಿವಯೋಗಿಗಳು ಹಾಗೂ ವಿಶ್ವ ಚೈತನ್ಯ ಶಕ್ತಿ ಎಲ್ಲರನ್ನು ಶ್ರೀರ–ಕ್ಷೆಯಾಗಿ ಕಾಪಾಡಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ವೆಂಕಟರೆಡ್ಡಿ ಡಾಕರೆಡ್ಡಿ, ವಿರಾರೆಡ್ಡಿ ಕಲಾಮೆ, ನಾಗೇಂದ್ರರೆಡ್ಡಿ ಲಚಪ್ಪನೋರ್, ಭೀಮಣ್ಣ ವಾಡೇಕರ್, ಭೀಮಶಾ ಸುತಾರ್, ಭೀಮರಾವ ವಾಡೇಕರ್, ಅಪ್ಪಣ್ಣ ಜನವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಾಗೇಂದ್ರರೆಡ್ಡಿ ಸ್ವಾಗತಿಸಿದರು.

ಕಾರ್ತಿಕಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.



# ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ

## ಸಂಘದ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಲಾಗುವುದು : ಬಿ.ಬಿ.ಕಾವೇರಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು : ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ನೇತೃತ್ವದ ಪದಾಧಿಕಾರಿಗಳ ನಿಯೋಗ ಫೆಬ್ರವರಿ 24 ರ ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಮುಖ್ಯಮಂತ್ರಿಯವರ

ಕಾರ್ಯದರ್ಶಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿಯವರಾದ ಬಿ.ಬಿ.ಕಾವೇರಿ ಅವರನ್ನು

ವಿಧಾನಸೌಧದ ಕಚೇರಿಯಲ್ಲಿ ಭೇಟಿ ಮಾಡಿ ಕಳೆದ ಒಂದು ವರ್ಷದಿಂದ ನೆನೆಗುದಿಗೆಬಿದ್ದಿರುವ ಸಂಘದ ಪ್ರಮುಖ ಮೂರು ಬೇಡಿಕೆಗಳನ್ನು ಈಡೇರಿಸಿ

ಕೊಡುವಂತೆ ಮನವಿ ಮಾಡಿತು.ಸಂಘದ ಮನವಿ ಸ್ವೀಕರಿಸಿ, ಪ್ರತಿಯೊಂದು ಬೇಡಿಕೆ ಬಗ್ಗೆ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ಅವರಿಂದ ಮಾಹಿತಿ ಪಡೆದುಕೊಂಡ ಕಾರ್ಯದರ್ಶಿ ಅವರು ಚರ್ಚಿಸಿದರು.ಬೇಡಿಕೆಗಳ ಈಡೇರಿಕೆಗೆ ತಕ್ಷಣ ಕ್ರಮತೆಗೆದು ಕೊಂಡು ಈಡೇರಿಸುವ ಭರವಸೆ ನೀಡಿದರು.

ಜನವರಿ 2024 ರಿಂದ ಇಲ್ಲಿಯವರೆಗೆ ಆನೇಕ ಬಾರಿ ಇಲಾಖೆಗೆ , ಸರ್ಕಾರ–ಕ್ಕೆ ಸಂಘದಿಂದ ಮನವಿ ಸಲ್ಲಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ತೆ–ೂಂದರೆಯಾಗುತ್ತಿದೆ ಎಂದು ರಾಜ್ಯಾಧ್ಯಕ್ಷರು ಕಾರ್ಯದರ್ಶಿ



ಯವರಿಗೆ ಮನವರಿಕೆ ಮಾಡಿಕೊಟ್ಟರು.ಜಾಹೀರಾತು ನೀತಿ 2013 , ಅನುಷ್ಠಾನ ನಿಯಮಗಳು 2014 ರ ನಿಯಮ 14 ರ ಟಿಪ್ಪಣಿ 3 ರ ಪ್ರಕಾರ ವಾರ್ತಾ ಇಲಾಖೆ ಆಯುಕ್ತರಿಗೆ ಜಾಹೀರಾತು ದರ ಹೆಚ್ಚಳ ಮಾಡಲು ಅಧಿಕಾರ ಇದ್ದರೂ ಸಹ ಕಳೆದ 4 ವರ್ಷಗಳಿಂದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ವಾರ್ತಾ ಇಲಾಖೆ ಆಯುಕ್ತರು ಜಾಹೀರಾತು ದರ ಹೆಚ್ಚಳ ಮಾಡಿಲ್ಲ.ಸರ್ಕಾರದ ಯಾವುದೇ ಆದೇಶ ಇಲ್ಲದೇ ಇದ್ದರೂ ಸಹ, ಪತ್ರಿಕೆಗಳ ಜಾಹೀರಾತು ಬಿಲ್ಲುಗಳಲ್ಲಿ ಏಜೆನ್ಸಿಗಳು ಕಾನೂನು ಬಾಹಿರವಾಗಿ ಕಡಿತ ಮಾಡುವ ಶೇ.15 ರಷ್ಟು ಕಮಿಷನ್ ಹಣವನ್ನು ತಕ್ಷಣ ನಿಲ್ಲಿಸಬೇಕು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಇರುವ 5 ವರ್ಷದೊಳಗಿನ ಹಿಂದುಳಿದ ವರ್ಗಗಳ ಮತ್ತು ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಪ್ರತಿ ತಿಂಗಳು ಒಂದು ಪುಟ ಸರ್ಕಾರದ ಪ್ರೋತ್ಸಾಹ ರೂಪದ ಜಾಹೀರಾತು ಬಿಡುಗಡೆ ಮಾಡಲು ಸರ್ಕಾರದಿಂದ ಆದೇಶ ಹೊರಡಿಸಬೇಕು ಎನ್ನುವ ಬೇಡಿಕೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದನೆ ಮಾಡಿದ ಕಾರ್ಯದರ್ಶಿ ಗಳು ಈ ಬೇಡಿಕೆಗಳನ್ನು ಸರ್ಕಾರದಿಂದ ಈಡೇರಿಸಿ ಕೊಡುವುದಾಗಿ ಭರವಸೆ ನೀಡಿದರು. ಸಂಘದ ನಿಯೋಗದಲ್ಲಿ ಉಪಾಧ್ಯಕ್ಷರಾದ ಭೀಮರಾಯ ಹದ್ದಿನಾಳ, ರಾಮಕೃಷ್ಣಮಾಮರ,ಹೆಚ್.ಎಸ್. ಹರೀಶ್,ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ, ರಾಜ್ಯ ಸಮಿತಿ ನಾಮನಿರ್ದೇಶನ ಸದಸ್ಯರಾದ, ಕೆ.ಕೆ.ಕುಲಕರ್ಣಿ, ಆಶೋಕ್ ಕುಮಾರ್ ಕರಂಜಿ, ವಿಶ್ವನಾಥ್ ಬೆಳಗಲ್ ಮಠ, ಮಹೇಶ್ ಅಂಗಡಿ, ಜಂಟಿ ಕಾರ್ಯದರ್ಶಿ ಬಿ.ದಿನೇಶ್, ಸಂಘಟನಾ ಕಾರ್ಯದರ್ಶಿಗಳಾದ ರಾಜು ತಳವಾರ, ರಮೇಶ್ ರೆಡ್ಡಿ, ಸಹ ಕಾರ್ಯದರ್ಶಿ ಎಂ.ಬಿ.ಕೊಡಗಲಿ,ಕಾರ್ಯದರ್ಶಿ ಶರಣು ಗದ್ದುಗೆ,ಜಿಲ್ಲಾಧ್ಯಕ್ಷರಾದ ಎಲ್.ಶಿವಶಂಕರ್,ಜಾಕೀರ್‌ಹುಸೇನ್ ತಾಳಿಕೋಟೆ,ವಿಜಯಕುಮಾರ್ ಪಾಟೀಲ್,ಎಂ.ಜೆ.ಶ್ರೀನಿವಾಸ್, ಪದಾಧಿಕಾರಿಗಳಾದ ಕೌಸಲ್ಯ ಪನ್ನಾಳ್ಕರ್, ಅಜಯ್ ಭೋಸ್ಲೆ, ರಾಮಚಂದ್ರಭೋಸ್ಲೆ, ಅಬ್ದುಲ್ ಖದೀರ್, ಆನಂದ್ ಗೋರ್ಕಲ್, ಎಸ್.ಡಿ.ವೇಣುಗೋಪಾಲ ಸುನೀಲ್ ಕುಲಕರ್ಣಿ, ಪ್ರಕಾಶ್ ಗುಳೇದಗುಡ್ಡ, ದೇವಪ್ಪ ಲಿಂಗದಾಳ್ ಸೇರಿದಂತೆ ಇನ್ನಿತರ ಜಿಲ್ಲಾ ಘಟಕಗಳ ಪದಾಧಿಕಾರಿಗಳು ಇದ್ದರು.

# ಉದ್ಯೋಗ ಮೇಳದ ಯಶಸ್ವಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ; ಜಿ.ಪಂ ಸಿಇಒ ರಾಹುಲ್

ರಾಯಚೂರು ಫೆ 25: ಜಿಲ್ಲೆಯಲ್ಲಿ ಮಾರ್ಚ್ 1ರಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಮೇಳದ ಯಶಸ್ವಿಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅಲ್ಲದೆ ನಿರುದ್ಯೋಗಿ ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೇಳದ ಲಾಭವನ್ನು ಪಡೆಯಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಅವರು ಹೇಳಿದರು.

ಫೆ.25ರ ಮಂಗಳವಾರದಂದು ನಗರದ ಜಿಲ್ಲಾ ಪಂಚಾಯತ್ ಕಚೇರಿಯ ಜಲನಿರ್ಮಲ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳದ ಎರಡನೇ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯ ನಿರುದ್ಯೋಗ ಯುವಕ–ಯುವತಿಯರಿಗೆ ಅನುಕೂಲವಾಗಲೆಂದು ಮತ್ತು ಅವರಿಗೆ ಉದ್ಯೋಗವನ್ನು ಒದಗಿಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಸಂಜೀವಿನಿ ಕೆ ಎಸ್ ಆರ್ ಎಲ್ ಪಿ ಎಸ್ ಮತ್ತು ಜಿಲ್ಲಾ ಕೌಶಲ್ಯ ಮಿಷನ್ ವತಿಯಿಂದ ಉದ್ಯೋಗ ಮೇಳವನ್ನು ಮಾ.1ರಂದು



ನಗರದ ಕೃಷಿ ವಿಶ್ವವಿದ್ಯಾಲಯ ಪ್ರೇಕ್ಷಾಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ಡಿಡಿಯು–ಜಿಕೆವೈ, ಸಂಕಲ್ಪ ಯೋಜನೆಯಡಿ ಜಿಲ್ಲೆಯಲ್ಲಿರುವ 2000 ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಕಾರ್ಯಕ್ರಮ ಇದಾಗಿದೆ ಎಂದರು.

ಮೇಳದಲ್ಲಿ 50 ವಿವಿಧ ಕಂಪನಿಗಳು ಭಾಗಿ; ಉದ್ಯೋಗ ಮೇಳದಲ್ಲಿ ಸುಮಾರು 50 ವಿವಿಧ ಕಂಪನಿಗಳು ಭಾಗವಹಿಸಲಿವೆ. ಈ ಕಂಪನಿಗಳು ನೇರವಾಗಿ ನಿರುದ್ಯೋಗಗಳನ್ನು ಸಂದರ್ಶಿಸಿ ತಮ್ಮ ಕಂಪನಿಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿವೆ. ಉದ್ಯೋಗ ಮೇಳವು ಅಂದು ಬೆಳಿಗ್ಗೆ 9.30ಕ್ಕೆ ವೇದಿಕೆ ಕಾರ್ಯಕ್ರಮದ ಮೂಲಕ ಉದ್ಘಾಟನೆಗೊಳ್ಳಲಿದೆ. ಒಂದು ದಿನ ನಡೆಯುವ ಈ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿ ಯುವಕರು ಭಾಗವಹಿಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಚಾರ ಮಾಡುವ ಮೂಲಕ ಹೆಚ್ಚಿನ ಅಭ್ಯರ್ಥಿಗಳು ಉದ್ಯೋಗ ಮೇಳಕ್ಕೆ ನೋಂದಾಯಿಸಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮಕ್ಕೆ ಮುಂದಾಗಬೇಕು ಎಂದು ತಿಳಿಸಿದರು.50 ಸ್ಟಾಲ್‌ಗಳನ್ನು ಸ್ಥಾಪನೆ; ಕೃಷಿ ವಿವಿಯ ಪ್ರೇಕ್ಷಾಗೃಹದ ಹೊರಗೆ 50 ಸ್ಟಾಲ್‌ಗಳನ್ನು ಸ್ಥಾಪಿಸಲಾಗುವುದು. ಜೊತೆಗೆ ಉದ್ಯೋಗ ಮೇಳಕ್ಕೆ ಅಗತ್ಯವಿರುವ ಹಾಗೂ ಉದ್ಯೋಗದಾತ ಸಂಸ್ಥೆಗೆ ಅಭ್ಯರ್ಥಿಗಳು ನೀಡಬೇಕಾದ ಅಗತ್ಯ ದಾಖಲೆಗಳ ಬಗ್ಗೆ ಮೊದಲೇ ವಿದ್ಯಾರ್ಥಿಗಳಿಗೆ ಮಾಹಿತಿ ತಲುಪಬೇಕು. ಜೊತೆಗೆ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯಾ ಉದ್ಯೋಗದಾತ ಸಂಸ್ಥೆ ಸೇರ್ಪಡೆ ಪತ್ರ ಅಥವಾ ಆಯ್ಕೆಯಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತಹ ವ್ಯವಸ್ಥೆಯಾಗಬೇಕು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಈಗಾಗಲೇ ಉದ್ಯೋಗ ಮೇಳಕ್ಕೆ ನೋಂದಣಿ ಮಾಡಿಕೊಳ್ಳಲು ಆನ್‌ಲೈನ್ ಪೋರ್ಟಲ್ ಮಾಡಲಾಗಿದ್ದು, ಜೊತೆಗೆ ಕ್ಯೂಆರ್‌ಕೋಡ್ ಪ್ರಕಟಿಸಲಾಗಿದೆ. ಜಿಲ್ಲೆಯ ನಿರುದ್ಯೋಗಿ ಯುವಕ, ಯುವತಿಯರು ಇದರ ಸದುಪಯೋಗಪಡೆದುಕೊಳ್ಳುವಂತೆ ಕೋರಿದರು.ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಡಿಡಿಯು–ಜಿಕೆವೈ, ಸಂಕಲ್ಪ ಯೋಜನೆಯಡಿ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ ಶಿವಪುರೆ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಡಾ.ಜಿ.ಯು.ಹುಡೇದ್, ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಬಸವರಾಜ್ ಯಂಕಂಚಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಟಿ.ತಿರುಮಲೇಶ್ವರ, ಜಿಲ್ಲಾ ಉದ್ಯೋಗಾಧಿಕಾರಿ ನವೀನ್ ಕುಮಾರ್, ಯುವಸಬಲೀಕರಣ ಮತ್ತು ಕ್ರಿಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಉದ್ಯಮಿಗಳು ವಿವಿಧ ಸಂಸ್ಥೆಗಳ ಮುಖ್ಯಸ್ಥರು ಇದ್ದರು.

# ಇ-ಖಾತಾ ನೀಡುವ ಆಂದೋಲನ

## ಯಶಸ್ವಿಗೊಳಿಸಿ: ಜಿಲ್ಲಾಧಿಕಾರಿ ನಿತೀಶ್ ಕೆ.

ರಾಯಚೂರು: ಫೆ 25 : ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಎಲ್ಲ ಆಸ್ತಿಗಳಿಗೆ ಇ–ಖಾತಾ ನೀಡಲು ಆಂದೋಲನ ಹಮ್ಮಿಕೊಂಡಿದ್ದು, ನಿಗದಿತ ಅವಧಿಯೊಳಗೆ ಎಲ್ಲ ಆಸ್ತಿಗಳಿಗೆ ಈ ಖಾತಾ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಯಚೂರು ಜಿಲ್ಲಾಧಿಕಾರಿ ನಿತೀಶ್ ಕೆ., ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿನ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಸ್ವತ್ತುಗಳಿಗೆ ಇ–ಖಾತಾ ನೀಡುವ ಸಂಬಂಧ ಕಾಯ್ದೆ ಮತು ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಇದ–ರಿಂದ ಅನಧಿಕೃತ ಸ್ವತ್ತುಗಳ ಮಾಲೀಕರು ತಮ್ಮ ಸ್ವತ್ತಿನ ಕಂದಾಯವನ್ನು ಪಾವತಿಸಿ ಇ–ಖಾತಾ ಪಡೆಯಬಹುದಾಗಿದೆ. ಇದರಿಂದ ಬಹಳ ದಿನಗಳಿಂದ ಅನಧಿಕೃತ ಸ್ವತುಗಳ ಖಾತಾ ಸಮಸ್ಯೆಗೆ ಪರಿಹಾರ ಕಲಿಸಲಾಗಿರುತ್ತದೆ. ಸ್ವತ್ತಿನ ಮಾಲೀಕರು ತಮ್ಮ ನಗರ



ಸ್ಥಳೀಯ ಸಂಸ್ಥೆಗೆ ಸ್ವತ್ತಿನ ಮಾಲೀಕತ್ವದ ದಾಖಲೆಗಳಾದ ನೋಂದಾಯಿತ ಪತ್ರಗಳು, ಚಾಲ್ತಿ ಸಾಲಿನವರೆಗೆ ಕಂದಾಯ ಪಾವತಿ ರಶೀದಿ, ಋಣಭಾರ ಪ್ರಮಾಣ ಪತ್ರ ಹಾಗೂ ಮಾಲೀಕರ ಪೋಟೋ, ಆಸ್ತಿಯ ಇರುವ ಸ್ಥಳದ ಪೋಟೋ, ಆಧಾರ ಕಾರ್ಡ್ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಲ್ಲಿಸಿದ 07 ದಿನಗಳ ಒಳಾಗಾಗಿ ಇ–ಖಾತಾ ಪಡೆಯಬಹುದಾಗಿದೆ. ಅಲ್ಲದೆ ಅನಧೀಕೃತ ಸ್ವತ್ತುಗಳಿಗೆ ಇ–ಖಾತಾ ಪಡೆಯಲು ನಿಗದಿಪಡಿಸಿದ ಅವಧಿ: ದಿನಾಂಕ:11.02.2025ರಿಂದ ಅವಧಿ 3 ತಿಂಗಳು. 3ತಿಂಗಳ ನಂತರ ಸಲ್ಲಿಕೆಯಾದ ಈ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಬಿ.ಖಾತಾ ಪಡೆಯಲು ಅರ್ಹ ಪ್ರಕರಣಗಳು: ಭೂ–ಪರಿವರ್ತನೆಯಾಗದೆ ಕಂದಾಯ ಜಮೀನಿನಲ್ಲಿ ನಿವೇಶನ ಖರೀದಿಸಿದ್ದಲ್ಲಿ. ಭೂ–ಪರಿವರ್ತನೆಯಾಗಿದ್ದು, ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆಯಾಗದ ಜಮೀನಿನಲ್ಲಿ ನಿವೇಶನ ಖರೀದಿಸಿದ್ದಲ್ಲಿ.ದಿನಾಂಕ:10.09.2024ಕ್ಕಿಂತ ಮುಂಚಿತವಾಗಿ ನೋಂದಣಿಯಾದ ನಿವೇಶನಗಳಿಗೆ ಬಿ.ಖಾತ ನೀಡಲು ಅವಕಾಶ ಕಲ್ಪಿಸಲಾಗಿದೆ.ಹೆಚ್ಚಿನ ಮಾಹಿತಿಗಾಗಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಥವಾ ಆಯಾ ಸ್ಥಳೀಯ ಸಂಸ್ಥೆಗಳ ಕಚೇರಿಯ ನೋಟೀಸ್‌ನಲ್ಲಿ ಸಹಾಯವಾಣಿ ಸಂಖ್ಯೆ ಮತ್ತು ಅರ್ಜಿ ಸ್ವೀಕರಿಸಲು ನೇಮಿಸಿದ ಸಿಬ್ಬಂದಿಯ ಹೆಸರನ್ನು ಪ್ರಚುರಪಡಿಸಲಾಗಿದ್ದು, ಈ ಸದವಕಾಶವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾ ಮಾತಾಡಲ್ಲ ಕೆಲಸ ಮಾಡಿ ತೋರಸ್ತೀನಿ



> ಆಶನಾಳ ಗ್ರಾಮಸ್ಥರು ನೀವಿಟ್ಟಿರುವ ಪ್ರೀತಿ, ವಿಶ್ವಾಸದ ಋಣ ತೀರಿಸಲಿಕ್ಕೆ ಸಾಧ್ಯವಿಲ್ಲ, ಆದರೆ ಅಭಿವೃದ್ಧಿಯ ಮುಖಾಂತರ ನಿಮ್ಮ ಋಣ ತೀರಿಸ್ತೀನಿ, ಕ್ಷೇತ್ರದ ಗ್ರಾಮ ಪಂಚಾಯತಿಯ ಎಲ್ಲಾ ಪಿಡಿಒಗಳು ಜನರಿಗೆ ಕುಡಿವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು.
>
> – ಶರಣಗೌಡ ಕಂದಕೂರ, ಶಾಸಕರು, ಗುರಮಠಕಲ್

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಫೆ.25: ಆಶನಾಳ ಗ್ರಾಮಕ್ಕೆ ಅಭಿವೃದ್ಧಿ ಮಾಡುವುದು ನನ್ನ ಜವಾಬ್ದಾರಿಯಾಗಿದೆ, ನಾ ಮಾತಾಡಲ್ಲ ಕೆಲಸ ಮಾಡಿ ತೋರಿಸ್ತೀನಿ, ನಮ್ ತಂದೆಯವರಿದ್ದಾಗ ಈ ಗ್ರಾಮದ ಶಾಲೆ ಕೋಣೆ ಅಭಿವೃದ್ಧಿ ಮಾಡಿದ್ದೇವೆ, ಈಗ ನಾನು ಶಾಲೆ, ಅಂಗನವಾಡಿ ಕೇಂದ್ರದ ಜೊತೆಗೆ ರಸ್ತೆ, ಚರಂಡಿ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿ ತೋರಿಸುತ್ತೇನೆ ಎಂದು ಗುರುಮಠಕಲ್ ಶಾಸಕ ಶರ–ಣಗೌಡ ಕಂದಕೂರ ಹೇಳಿದರು.

ತಾಲೂಕಿನ ಆಶನಾಳ ಗ್ರಾಮದಲ್ಲಿ 3ಕೋಟಿ ಹೆಚ್ಚು ಅನುದಾನದ ಅಭಿವೃದ್ಧಿ ಕಾಮಗಾರಿಗಳಾದ ಸಮಣಪುರ್ ಜಿರಕಿತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಹತ್ತಿಕುಣಿ ರಾಮನಾಯಕ ತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಬಾಚವಾರ ಹಳಿತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಬಾಚವಾರ ಹೊಸತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಹತ್ತಿಕುಣಿ ಎಸ್ಸಿ ವಾರ್ಡನಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಕುರುಕುಂಬಳ ತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಎಸ್. ಹೊಸಳ್ಳಿ 20ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಆಶನಾಳ ತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಸಮಣಾಪುರ್ ಸಣ್ಣ ತಾಂಡದಲ್ಲಿ 10ಲಕ್ಷ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, ಆಶನಾಳ ಗ್ರಾಮದಲ್ಲಿ, 30ಲಕ್ಷ ಸಿ.ಸಿ.ರಸ್ತೆ ನಿರ್ಮಾಣ, ಬೆಳಗೇರಾ ಗ್ರಾಮದ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 2ಕೋಣೆಗಳು ಮತ್ತು ಸಲಕರಣೆಗಳು ಕಾಮಗಾರಿಯ ಅಡಿಗಲ್ಲು ಸಮಾರಂಭ, ಹೊನಗೇರಾ ಗ್ರಾಮದ, ಅಂಗನವಾಡಿ ಕೇಂದ್ರ–4 ಕಟ್ಟಡ ಕಾಮಗಾರಿಯ ಅಡಿಗಲ್ಲು ಸಮಾರಂಭ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.


ಆಶನಾಳ ಗ್ರಾಮದ ಎಸ್ಸಿ ವಾರ್ಡ್ನಲ್ಲಿ 20 ಲಕ್ಷ ಸಿಸಿ ರಸ್ತೆ ಅನುದಾನ ಬಿಡುಗಡೆ–ಯಾಗಿದೆ, ಅಧಿವೇಶನದ ನಂತರ ಚಾಲನೆ ನೀಡಲಾಗುವುದು, ಆಂಜನೇಯ ಸ್ವಾಮಿ ದೇವಸ್ಥಾನ ಅಭಿವೃದ್ಧಿಯ ಜೊತೆಗೆ ಜೆಸ್ಕಾಂ ಮತ್ತು ಶಿಕ್ಷಣ ಇಲಾಖೆಯ ಕಾಮಗಾರಿಗಳಿಗೆ ಆದ್ಯತೆ ನೀಡುತ್ತೇನೆ, ಅದರ ಜೊತೆಗೆ ಆಶನಾಳ ಶಾಲೆ ಮಕ್ಕಳು ಶಾಲೆ ಆರ್‌ಒ ಪ್ಲಾಂಟ್ ಕೇಳುತ್ತಿದ್ದಾರೆ ಕೂಡಲೇ ಅವರಿಗೆ ಆರ್‌ಒ ಪ್ಲಾಂಟ್ ಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಶ್ಚಂದ್ರ ಕಟಕಟಿ, ಇಇ ಶಿವರಾಜ ಹುಡೇದ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ರಾಮಣ್ಣ ಕೋಟಗೇರಾ, ಈಶ್ವರ ನಾಯಕ, ನರಸಪ್ಪ ಕವಡೆ ಸೇರಿದಂತೆ ಗ್ರಾಪಂ ಅಧ್ಯಕ್ಷರು, ಪಿಡಿಗಳು ಹಾಗೂ ಆಶನಾಳ ಗ್ರಾಮಸ್ಥರು, ಇತರರಿದ್ದರು.

# ವಡವಡಗಿ ಗ್ರಾಪಂ ಅಧ್ಯಕ್ಷ-ಉಪಾಧ್ಯಕ್ಷರ ಅವಿರೋಧ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಫೆ.25: ದೇವರ ಹಿಪ್ಪರಗಿ ಮತ ಕ್ಷೇತ್ರ ವ್ಯಾಪ್ತಿಯ ವಡವಡಗಿ ಗ್ರಾಮ ಪಂಚಾಯತ ಅಧ್ಯಕ್ಷ–ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹಿಂದುಳಿದ ವರ್ಗ ಅ ಮಹಿಳೆ ಮೀಸಲು ಸ್ಥಾನಕ್ಕೆ ಅಧ್ಯಕ್ಷರಾಗಿ ನಂದಿಹಾಳ ಗ್ರಾಮದ ಪಾರ್ವತಿ ಶಂಕರ ಗೌಡ ಹಳ್ಳಿ ಹಾಗೂ ಅನುಸೂಚಿತ ಜಾತಿ ಮಹಿಳೆ ಮೀಸಲು ಸ್ಥಾನಕ್ಕೆ ಉಪಾಧ್ಯಕ್ಷರಾಗಿ ಸಿಂಧಗೇರಿ ಗ್ರಾಮದ ಮಾದೇವಿ ರಾಜು ಹರಿಜನ ಅವಿರೋಧವಾಗಿ ಆಯ್ಕೆಯಾದರು. ವಡವಡಗಿ ಗ್ರಾಮ ಪಂಚಾಯತ್ ಸಭಾ ಭವನದಲ್ಲಿ ಮಂಗಳವಾರ ನಡೆದ ಈ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪಾರ್ವತಿ ಶಂಕರಗೌಡ ಹಳ್ಳಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮಾದೇವಿ ರಾಜು ಹರಿಜನ



ಇವರಿಬ್ಬರೇ ನಾಮಪತ್ರ ಸಲ್ಲಿಸಿ ಬೇರಾರು ನಾಮಪತ್ರ ಸಲ್ಲಿಸದೆ ಇರುವುದರಿಂದ ಚುನಾವಣಾಧಿಕಾರಿಯೂ ಆದ ತಾಪಂ ಇಒ ದೇಸಾಯಿ ಅವರು ಇವರಿಬ್ಬರೂ ಅವಿರೋಧವಾಗಿ ಆಯ್ಕೆಂಯಾಗಿದ್ದಾರೆಂದು ಘೋಷಿಸಿದರು. ಒಟ್ಟು 23 ಸದಸ್ಯ ಬಲ ಹೊಂದಿರುವ ಈ ಪಂಚಾಯತ್‌ನ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ 20 ಜನ ಸದಸ್ಯರು ಭಾಗವಹಿಸಿದ್ದರು. ಈ ಸಮಯದಲ್ಲಿ ಸದಸ್ಯರಾದ ಈರಣ್ಣ ಚಂ.ಯಲಗೋಡ, ಬಸಪ್ಪ ಸಂ. ಭಜಂತ್ರಿ, ಆಫರೀನ ಬ.ಅತ್ತಾರ, ಗಂಗಮ್ಮ ಶಂ.ನರಸಲಗಿ, ದಯಾನಂದ ತಳವಾರ, ಶಿವಮ್ಮ ಮ. ಮಾಸ್ತಿ, ಮಂಜುನಾಥ್ ಸಿ.ಬಿರಾದಾರ, ಪೂರ್ಣಿಮಾ ದೇ.ಹೆಬ್ಬಾಳ, ರೇಣುಕಾ ಬ. ನಾಯ್ಕೋಡಿ, ರೇಖಾ ಪ್ರಕಾಶ್ ಕಮ್ಮಾರ, ಪಾರುಬಾಯಿ ರ. ಚೌವಾಣ, ನಾನಗೂಡ ಸಂ. ನಾಡಗೌಡ್ರ, ಶ್ರೀಶೈಲ್ ಮ. ಸಾಸನೂರ, ಬಸಮ್ಮ ದೇ. ಪೊಲೇಶಿ, ನೀಲಮ್ಮ ಮ.ಬ್ಯಾಳಿ, ಸರೋಜಿನಿ ನಿಂ. ಹೇರಾನವರ, ಕಾಸಪ್ಪ ಪೀರಪ್ಪ ಹೊಸಮನಿ, ರಾಮಚಂದ್ರ ಸಂ.ಸಾಸನೂರ, ಲಕ್ಷ್ಮೀಬಾಯಿ ಚಂ.ಮಾರನಾಳ, ಶಂಕರಗೌಡ ಗು. ದೊಡಮನಿ, ಶಂಕ್ರಪ್ಪ ಮು.ಗಾಣದಕಲ್ಲ ಹಾಗೂ ವಡವಡಗಿ, ನಂದಿಹಾಳ, ಸಿಂಧಗಿರಿ, ಹುಲಿಬೆಂಚಿ, ನಾಗರಾಳ ಹುಲಿ ಗ್ರಾಮಗಳ ಗಣ್ಯರು ಹಿರಿಯರು ಇದ್ದರು

# ಗುಣಮಟ್ಟದ ಕಾಮಗಾರಿಗೆ ಮೊದಲಾದ್ಯತೆ ನೀಡಿ : ಶರಣಗೌಡ ಕಂದಕೂರ

ಯಾದಗಿರಿ :ಫೆ.25: ಅಭಿವೃದ್ಧಿಯ ವಿಷಯದಲ್ಲಿ ನಾನು ರಾಜಿಯಾಗಲ್ಲ, ನನ್ನ ಮತಕ್ಷೇತ್ರದಲ್ಲಿ ಕೋಟ್ಯಂತರ ರೂಪಾಯಿ ಅಭಿವೃದ್ಧಿ ಕಾಮಗಾರಿಗಳನ್ನುಕೈಗೊಳ್ಳುತ್ತಿದ್ದು, ನಿಗದಿತಸಮಯದಲ್ಲಿಗುಣಮಟ್ಟದ ಕಾಮಗಾರಿ ಮಾಡಬೇಕು ಎಂದು ಗುರುಮಠಕಲ್ ಶಾಸಕರಾದ ಶರಣಗೌಡ ಕಂದಕೂರ ಹೇಳಿದರು.

ತಾಲೂಕಿನ ಖೇಮುನಾಯಕ ತಾಂಡಾದಲ್ಲಿ 90 ಲಕ್ಷ ವೆಚ್ಚದಲ್ಲಿ ಥಾವರುನಾಯಕ ತಾಂಡದಿಂದ ಖೇಮುನಾಯಕ ತಾಂಡಾದ ವರೆಗೆ ರಸ್ತೆ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಥಾನುನಾಯಕ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಅಡಮಡಿ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ನಿಂಗಸನಹಳ್ಳಿ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಥಾವರು ನಾಯಕ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಕಾಂಚಗಾರಹಳ್ಳಿ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಕ್ಯಾಸಪ್ಪನಹಳ್ಳಿ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಹೊರುಂಚಾ ಜಕನಕಲ್ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 10 ಲಕ್ಷ ವೆಚ್ಚದಲ್ಲಿ ಹೊರುಂಚಾ ನಡುವಿನ ತಾಂಡದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ, 20 ಲಕ್ಷ ವೆಚ್ಚದಲ್ಲಿ ವೆಂಕಟೇಶ್ ನಗರ ತಾಂಡದಲ್ಲಿ ಪೈಪ್ಲೈನ್ ಕಾಮಗಾರಿ, 10 ಲಕ್ಷ ವೆಚ್ಚದಲ್ಲಿ ಹೊರುಂಚಾ ಲಾಲಸಿಂಗ್ ತಾಂಡಾದ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 2 ಕೋಣೆಗಳ ಕಟ್ಟಡ ಕಾಮಗಾರಿ, 30 ಲಕ್ಷ ವೆಚ್ಚದಲ್ಲಿ ಯರಗೋಳ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 2 ಕೋಣೆಗಳ ಉದ್ಘಾಟನಾ ಹಾಗೂ ಕಾಮಗಾರಿಗಳ ಅಡಿಗಲ್ಲು ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಳೆದ ಹಲವು ದಶಕಗಳಿಂದ ಖೇಮುನಾಯಕ ತಾಂಡಾಕ್ಕೆ ಯಾವುದೇ ಸಚಿವರು, ಶಾಸಕರು ಬಂದಿಲ್ಲ ಇಲ್ಲಿ ಅಭಿವೃದ್ಧಿಗೆ ದಿ.ನಾಗನಗೌಡರು ಶಾಸಕರಾದ ಮೇಲೆ ಗುಣಮಟ್ಟದ ರಸ್ತೆ, ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಪ್ರಾರಂಭವಾಗಿವೆ ಎನ್ನುವ ಜನರ ಮಾತು ಕೇಳಿ ಸಂತೋಷವಾಗಿದೆ. ನಮಗೆ ಎಲ್ಲಾ ತಾಂಡಾ, ಗ್ರಾಮಗಳು ಅಷ್ಟೇ ಅಭಿವೃದ್ಧಿ ವಿಷಯ ಬಂದಾಗ ನಾನು ಯಾವುದೇ ರಾಜಕೀಯ ಮಾಡಲ್ಲ, ಚುನಾವಣೆ ಬಂದಾಗ ರಾಜಕೀಯ ಮಾಡೋಣ ಅಭಿವೃದ್ಧಿ ಎಲ್ಲರಿಗೂ ಸಿಗಲಿ, ಪಕ್ಷಾತೀತವಾಗಿ ಎಲ್ಲರೂ ಅಭಿವೃದ್ಧಿಗೆ ಸ್ಪಂದಿಸೋಣ ಎಂದು ಹೇಳಿದರು.

ಇಲ್ಲಿಯವರೆಗೆ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ನನ್ನ ಮತಕ್ಷೇತ್ರದಲ್ಲಿ ಅಭಿವೃದ್ಧಿ ಕೈಗೊಂಡಿದ್ದೇನೆ, ಈಗ ಬೇಸಿಗೆ ಪ್ರಾರಂಭವಾಗಿದೆ ಯಾವುದೇ ಕಾರಣಕ್ಕೂ ಜನತೆಗೆ ಕುಡಿಯುವ ನೀರಿನ ಸಮಸ್ಯೆಯಾಗಬಾರದು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನವರು ಯಾವುದೇ ಸಮಯದಲ್ಲಿಯಾದರೂ ಜನರಿಗೆ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ಎಷ್ಟು ಸಾಧ್ಯವೋ ಅಷ್ಟು ಅನುದಾನವನ್ನು ನಾನು ಕುಡಿಯುವ ನೀರಿಗಾಗಿ ಕೊಡುತ್ತೇನೆ ಮತ್ತು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್ ಸಿಇಒ ಅವರಿಗೆ ಪತ್ರ ಬರೆಯುತ್ತೇನೆ ಕುಡಿವ ನೀರಿನ ಯೋಜನೆಗಳು ಆದಷ್ಟು ಬೇಗ ಮುಗಿಸಬೇಕು, ಮತ್ತು ದಿಢೀರ್ ಉದ್ಭವಿಸುವ ಕುಡಿವ ನೀರಿನ ಸಮಸ್ಯೆ ಬಗೆಹರಿಸಲು ಪಿಡಿಒಗಳು ಮತ್ತು ಪಿಆರ್‌ಇ ವಾಟರ್ ಸಪ್ಲಾಯ್ ಇಲಾಖೆಯವರು ಕೂಡ ಜನತೆಗೆ ಸ್ಪಂದಿಸಿ, ಕುಡಿವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಗುರುಮಠಕಲ್ ಮತಕ್ಷೇತ್ರದಲ್ಲಿ ಯಾವುದೇ ಶಾಲೆಯೂ ಮೂಲಸೌಕರ್ಯದಿಂದ ವಂಚಿತವಾಗಬಾರದು, ಶಿಕ್ಷಣಕ್ಕಾಗಿ ಎಷ್ಟು ಅನುದಾನ ಬೇಕು, ಅಷ್ಟು ಅನುದಾನ ತಂದು ಕೊಡಲಿಕ್ಕೆ ನಾನು ಸಿದ್ದನಿದ್ದೇನೆ, ಇನ್ನೂ ಬೇರೆ ಬೇರೆ ಯಾವುದೇ ಯೋಜನೆಯಾದರೂ ಪರವಾಗಿಲ್ಲ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಗಳ ಕೊರತೆ–ಯಾಗದಂತೆ ಕ್ರಮಕೈಗೊಳ್ಳಬೇಕು ಎಂದು ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಶ್ಚಂದ್ರ ಕಟಕಟಿ, ಇಇ ಶಿವರಾಜ ಹುಡೇದ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ರಾಮಣ್ಣ ಕೋಟಗೇರಾ, ಈಶ್ವರ ನಾಯಕ, ನರಸಪ್ಪ ಕವಡೆ ಸೇರಿದಂತೆ ಗ್ರಾಪಂ ಅಧ್ಯಕ್ಷರು, ಪಿಡಿಗಳು ಇತರರಿದ್ದರು.

ಯಪ್ಪಾ ಕೆಲಸ ಕೊಡಿಸು ಕೈಮುಗಿತೀವಿ

ಖೇಮುನಾಯಕ ತಾಂಡಾದಲ್ಲಿ ಅಭಿವೃದ್ಧಿ ಕಾಮಗಾರಿಗಳ ಅಡಿಗಲ್ಲು ಸಮಾರಂಭ ನೆರವೇರಿಸಿ ಯರಗೋಳ ಗ್ರಾಮದಲ್ಲಿ ಆಗಮಿಸಿದಾಗ ಶಾಸಕ ಶರಣಗೌಡ ಕಂದಕೂರ ಅವರನ್ನು ಮಾರ್ಗಮಧ್ಯೆ ಭೇಟಿಯಾದ ಗ್ರಾಮದ ಮಹಿಳೆಯರು ಯಪ್ಪಾ ಕೆಲಸ ಕೊಡಿಸು ಕೈಮುಗಿತೀವಿ ಎಂದಾಗ ತಾಯಂದಿರು ಕೈಮುಗಿಯುವುದು ಬೇಡ ನಿಮ್ಮ ಮಗನಾಗಿ ನಾನು ಕೆಲಸ ಮಾಡುತ್ತೇನೆ. ಪಿಡಿಒ ಅವರಿಗೆ ಹೇಳುತ್ತೇನೆ, ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾದಲ್ಲಿ ಕೆಲಸ ಮಾಡಿಕೊಡಲು ಹೇಳುತ್ತೇನೆ ಎಂದಾಗ ಅಷ್ಟು ಮಾಡು ತಂದೆ ಪುಣ್ಯಾರ್‍ತಾದ ಎಂದು ಹಲವು ಮಹಿಳೆಯರು ಕೈಮುಗಿದರು.



ಕುಡಿವ ನೀರಿನ ಸಮಸ್ಯೆ ನಿವಾರಣೆಗೆ ಪತ್ರ

ಗುರುಮಠಕಲ್ ಮತಕ್ಷೇತ್ರದಲ್ಲಿ ಯಾವ ಗ್ರಾಮಕ್ಕೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು, ಬೇಸಿಗೆ ಆರಂಭವಾಗಿದ್ದು, ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಶಾಸಕರ ಅನುದಾನವು ನೀಡುತ್ತೇನೆ, ಹೆಚ್ಚುವರಿಯಾಗಿ ಅನುದಾನ ಬೇಕಿದ್ದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಿಇಒ ಅವರಿಗೆ ಪತ್ರ ಬರೆಯುತ್ತೇನೆ. ಪಿಡಿಒಗಳು ಹಾಗೂ ವಾಟರ್ ಸಪ್ಲಾಯ ಇಲಾಖೆ ಅಧಿಕಾರಿಗಳು ನೀರಿನ ಬವಣೆ ತಪ್ಪಿಸಲು ಕ್ರಮಕೈಗೊಳ್ಳಬೇಕು.

– ಶರಣಗೌಡ ಕಂದಕೂರ ಶಾಸಕರು, ಗುರುಮಠಕಲ್

# ಮೀನು ಮರಿ ಉತ್ಪಾದನಾ ಪಾಲನ ಕೇಂದ್ರಕ್ಕೆ ಯೋಜನೆ ರೂಪಿಸಿ :ಜಿ. ಪಂ ಸಿಇಓ ರಾಹುಲ್ ರತ್ನಂ ಪಾಂಡೆಯ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಫೆ.25:ಮೀನುಗಾರಿಕೆ ಇಲಾಖೆಯ ಮೀನು ಮರಿ ಉತ್ಪಾದನಾಪಾಲನಾಕೇಂದ್ರವನ್ನು ಅಭಿವೃದ್ದಿಪಡಿಸಲು ಸಮಗ್ರ ಯೋಜನೆ ರೂಪಿಸುವಂತೆ *ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ* ಸೂಚಿಸಿದರು.

ದಿನಾಂಕ:25-02-2025ರಂದು ಶಿವಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೋರುಕಾ ಹತ್ತಿರ ಇರುವ ಮೀನುಗಾರಿಕೆ ಇಲಾಖೆಯ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಮೂಲಭೂತ ಸೌಲಭ್ಯ ಹಾಗು ಮೀನು ಮರಿ ಉತ್ಪಾದನೆಯನ್ನು ಪರಿಶೀಲಿಸಿದರು.

ಕೇಂದ್ರಕ್ಕೆ ಅವಶ್ಯವಿರುವ ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸಿದಲ್ಲಿ ಜಿಲ್ಲಾ ಪಂಚಾಯತಿ, ಕಲ್ಯಾಣ ಕರ್ನಾಟಕ ಅಭಿವೃದ್ದಿ ಮಂಡಳಿಯ ಅನುದಾನದಡಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಅಭಿವೃದ್ದಿಪಡಿಸಲಾಗುವದು ಹಾಗು ಇಲಾಖೆಯಿಂದ ಆಗಬೇಕಾಗಿರುವ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಆಯುಕ್ತರ ಕಛೇರಿಯಿಂದ ಅನುಮೋದನೆ ಪಡೆಯಲು ಕ್ರಮವಹಿಸುವಂತೆ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು. ಬರುವ 02 ವರ್ಷದೊಳಗಾಗಿ ಮಾದರಿ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರವನ್ನಾಗಿ ನಿರ್ಮಿಸಲಾಗುವುದು ಎಂದರು. ಈ ಭಾಗದ ಅತೀ ದೊಡ್ಡ ಮೀನು ಮರಿ ಉತ್ಪಾದನಾ ಕೇಂದ್ರವಾಗಿದ್ದು ಈ ಮುಂಚೆ ಇದ್ದ ಮೀನು ಮರಿ ಉತ್ಪಾದನೆ ಮಾದರಿ ಕೇಂದ್ರವಾಗಿ ಮಾರ್ಪಡಿಸಲಾಗುವದು ಎಂದರು.

ದ್ರಾಕ್ಷಿ ಮೇಳ ಮತ್ತು ಜೇನು ಮೇಳಕ್ಕೆ ಭೇಟಿ:– ಕೊಪ್ಪಳ ನಗರದಲ್ಲಿ ತೋಟಗಾರಿಕೆ ಏರ್ಪಡಿಸಲಾಗಿದ್ದ ದ್ರಾಕ್ಷಿ ಮತ್ತು ಜೇನು ಮೇಳಕ್ಕೆ ಭೇಟಿ ನೀಡಿ ಮೇಳದಲ್ಲಿ ರೈತರು ಬೆಳೆದ ದ್ರಾಕ್ಷಿ, ಜೇನು, ದಾಳಿಂಬೆ ಇತ್ಯಾದಿ ಹಣ್ಣುಗಳ ಬೆಳೆದು ಮಾರಾಟವಾಗುತ್ತಿರುವ ಕುರಿತು ರೈತರು ಮತ್ತು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕಿ ಭಾಗ್ಯಶ್ರೀ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪತುರಾದಿ, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ರಜನೀಶ್, ಬಸವರಾಜ, ಗ್ರಾಮ ಪಂಚಾಯತ ಅಧ್ಯಕ್ಷ ರವಿಕುಮಾರ ಚೆಲಸಾನಿ, ಉಪಾಧ್ಯಕ್ಷ ವೆಂಕಟೇಶ ಚನ್ನದಾಸರ, ಗ್ರಾಮ ಪಂಚಾಯತ ಸದಸ್ಯರಾದ ಶೇಷನಗೌಡ, ಗ್ರಾಮ ಪಂಚಾಯತ ಅಭಿವೃದ್ದಿ ಅಧಿಕಾರಿ ಮಂಜುಳಾ ಪಾಟೀಲ್, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ಗ್ರಾಮ ಪಂಚಾಯತಿ ಕರವಸೂಲಿಗಾರ ಮಂಜುನಾಥ ಹಾಜರಿದ್ದರು.

# ವಿದ್ಯಾರ್ಥಿಗಳು ಆಡಂಬರದ ಜೀವನವನ್ನು ತ್ಯಾಗಮಾಡಿ: ಶಾಬಾದಕರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಫೆ.25:ವಿದ್ಯಾರ್ಥಿಗಳು ಆಡಂಬರದ ಜೀವನವನ್ನು ತ್ಯಾಗಮಾಡಿ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಚಂದ್ರಕಾಂತ ಶಾಬಾದಕರ್ ತಿಳಿಸಿದರು. ತಾಲ್ಲೂಕಿನ ತಾಳಮಡುಗಿ ಗ್ರಾಮದ ಬಸವೇಶ್ವರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಆಡಂಬರದ ಜೀವನವನ್ನು ತ್ಯಾಗಮಾಡಿ ತಮ್ಮ ಸ್ಪಷ್ಟ ಗುರಿಯೆಡೆಗೆ ಶಿಸ್ತಿನಿಂದ ಸಾಗಿದರೆ ಉತ್ತುಂಗ ಸ್ಥಾನಕ್ಕೆ ಏರಬಹುದು. ಅಲ್ಲದೆ ಸತತ ಪ್ರಯತ್ನ, ಸಮಯ ಪಾಲನೆ ಪ್ರಾಮಾಣಿಕತೆ ರೂಢಿಸಿಕೊಂಡರೆ ಯಶಸ್ಸು ಒಲಿದು ಬರುತ್ತದೆ ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಹಣಮಂತ ಗೌಡಗಾಂವಕರ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮಗೆ ದೊರೆತ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಮೌಲ್ಯಗಳಿಂದ ಜೀವನದಲ್ಲಿ ನೆಮ್ಮದಿ ಪಡೆಯಲು ಸಾಧ್ಯವಿದೆ. ಪರೀಕ್ಷೆ ಎಂಬ ಭಯಬೇಡ ಅದೊಂದು ಹಬ್ಬವೆಂದು ತಿಳಿದು ಮುನ್ನುಗಬೇಕು ಎಂದು ಹೇಳಿದರು. ಕಾಲೇಜು ಕಮಿಟಿ ಉಪಾಧ್ಯಕ್ಷ ಈಶ್ವರ ನೇಳಗಿ ಮಾತನಾಡಿ, ಕಂಠ ಪಾಠ ಮಾಡದೆ ಅದನ್ನು ಅನುಭವದ ರೀತಿಯಲ್ಲಿ ಅರಿತುಕೊಂಡು ಓದಿದರೆ ಪರೀಕ್ಷೆಯಲ್ಲಿ ಎಲ್ಲವೂ ಜ್ಞಾಪಕಕ್ಕೆ ಬರುತ್ತವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಪ್ರಿನ್ಸಿಪಾಲ ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಮನಮಥ ಡೊಳೆ, ಉಪನ್ಯಾಸಕರಾದ ಸುನಿಲಕುಮಾರ, ರವೀಂದ್ರ ರೆಡ್ಡಿ, ಪ್ರೀತಿ, ಸಂಗೀತ, ನಿವೃತ್ತ ಉಪನ್ಯಾಸಕ ಮಾಣಿಕರಾವ ಗೊರಟೆ ಸೇರಿ ವಿದ್ಯಾರ್ಥಿಗಳು ಇದ್ದರು. ಕಾರ್ಯಕ್ರಮವನ್ನು ಉಪನ್ಯಾಸಕ ಸಂಜುಕುಮಾರ ಜುಮ್ಮಾ ನಿರೂಪಿಸಿ ವಂದಿಸಿದರು.

# ಸಿದ್ದಲಿಂಗ ಶ್ರೀಗಳು ಭಾವೈಕ್ಯತೆ ಸ್ವಾಮೀಜಿ : ಎಸ್ ಬಿ ಚಂಗಳಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.25: ಗದಗಿನ ಜಗದ್ಗುರು ತೋಂಟದ ಸಿದ್ಧಲಿಂಗ ಶ್ರೀಗಳು ಸರ್ವ ಧರ್ಮದವರನ್ನು ಒಂದು ಎಂದು ಭಾವಿಸಿ ದುಃಖಿತರ, ಶೋಷಿತರನ್ನು ಮೇಲೆತ್ತುವ ಕೆಲಸ ಮಾಡುವುದರೊಂದಿಗೆ ಭಾವೈಕ್ಯತೆಯನ್ನು ಮೆರೆದರು. ಅದೇ ಕಾರಣದಿಂದ ಶ್ರೀಗಳವರ ಜನ್ಮದಿನವನ್ನು ಭಾವೈಕ್ಯತಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಎಂದು ನಿವೃತ್ತ ಪ್ರಾಚಾರ್ಯ ಎಸ್



ಬಿ ಚಂಗಳಿ ಹೇಳಿದರು.

ಅವರು ಮಂಡಲಗಿರಿಯ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ ಪೂಜ್ಯರ 76ನೇ ಜಯಂತ್ಯೋತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡುತ್ತಿದ್ದರು.

ವೈಚಾರಿಕ ಕ್ರಾಂತಿಯ ಜೊತೆಗೆ ಸಾಮಾಜಿಕ ಕ್ರಾಂತಿ ಮಾಡಿದರು. ಸದಾ ತುಳಿತಕ್ಕೊಳಗಾದವರ ಬಗ್ಗೆನೇ ಚಿಂತಿಸುತ್ತಿದ್ದರು. ಎಲ್ಲರೂ ಪ್ರಗತಿ ಹೊಂದಬೇಕಾದರೆ ಶಿಕ್ಷಣ ಪಡೆಯಬೇಕು ಎಂದರಲ್ಲದೆ, ಅನೇಕ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದರು ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಪತ್ರಕರ್ತ ವೀರಯ್ಯ ವಿ ಹಿರೇಮಠ ಮಾತನಾಡಿ ಶ್ರೀಗಳು ತುಂಬಾ ಅರ್ಥಪೂರ್ಣವಾದ ಜೀವನ ನಡೆಸಿದವರು. ಅವರು ನಡೆಸಿದ ಅನೇಕ ಹೋರಾಟಗಳಿಂದಾಗಿ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ನಿಂತಿದ್ದಾರೆ. ಅವರ ಚಿಂತನೆ, ವಿಚಾರ, ಅನಿಷ್ಠ ಪದ್ಧತಿಗಳ ಬಗೆಗಿನ ಕೂಗು ಹಸಿರಾಗಿಯೇ ಉಳಿದಿವೆ ಎಂದರು. ಭಾವೈಕ್ಯತಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ತರಬೇತುದಾರರಿಗೆ ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಿಂದ ಪಾರಿತೋಷಕ ವಿತರಣೆ ಮಾಡಲಾಯಿತು.

ಭೋಜರಾಜ ಸೊಪ್ಪಿಮಠ ಪ್ರಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಎಸ್ ಕೆ ಸಂಗಳದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಿಎಸ್ ಅಂಗಡಿ ಸ್ವಾಗತಿಸಿದರೆ, ಕೆ ಆರ್ ಕೋರಿ ವಂದಿಸಿದರು. ಎಚ್ ವೈ ಉಪ್ಪಾರ, ಎಲ್ ಎಚ್ ಮಡಿವಾಳರ, ಎಲ್ ಆರ್ ಬಸಾಪುರ, ಶರಣಪ್ಪ ಪಟ್ಟಣಶೆಟ್ಟಿ, ಸಂಗಯ್ಯ ಸಾರಂಗಮಠ, ಮುತ್ತಣ್ಣ ಚಲವಾದಿ, ರುದ್ರಯ್ಯ ಕಂತಿ ಉಪಸ್ಥಿತರಿದ್ದರು.

# ಸಿಸಿ ಕ್ಯಾಮೆರಾ ಅಳವಡಿಸಲು ಪಿಎಸ್‌ಐ ಮನವಿ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಫೆ.25: ಕರ್ನಾಟಕ ರಾಜ್ಯ ಸಾರ್ವಜನಿಕ ಸುರಕ್ಷತೆಯ ಅಧಿನಿಯ 2017ರ ಅಡಿಯಲ್ಲಿ ಸಾರ್ವಜನಿಕರ ಸುರಕ್ಷತೆ ಮತ್ತು ಅಪರಾಧಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಪಟ್ಟಣದ ಪ್ರಮುಖ ಸ್ಥಳಗಳಾದ ಬಸವರಾಜ ವೃತ್ತ, ಗಾಂಧಿ ವೃತ್ತಿ, ಶಿವಾಜಿ ವೃತ್ತ, ಚಕ್ರಧರಿ(ಮುಸ್ತರಿ ರಸ್ತೆ ಶಿಲುಬೆ ಹತ್ತಿರ), ಬಸ್ ಸ್ಟ್ಯಾಂಡ್ ಹೋಗುವ ಮಾರ್ಗದಲ್ಲಿ, ಸರ್ದಾರ್ ವೃತ್ತ, ನೆಹೆರು



ವೃತ್ತ, ಕೋಡಂಬಲ್ ಕ್ರಾಸ್ ಸೇರಿದಂತೆ ಪಟ್ಟಣದ 40 ಪ್ರಮುಖ ಸ್ಥಳಗಳಲ್ಲಿ ಎ.ಎನ್.ಪಿ.ಆರ್ ಗುಣಮಟ್ಟದ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಆರಕ್ಷಕ ಉಪನಿರೀಕ್ಷರು ತಿಳಿಸಿದ್ದಾರೆ.

# ಕಣ್ಣಿನ ಆರೋಗ್ಯ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ: ಮಲ್ಲಿಕಾರ್ಜುನ ಶ್ರೀ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಫೆ.25: ಕಣ್ಣುಗಳು ದೇಹದ ಅಮೂಲ್ಯ ಅಂಗಗಳಾಗಿವೆ, ಅವುಗಳನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ ಅದರ ರಕ್ಷಣೆ ಕುರಿತು ಹೆಚ್ಚು ಜಾಗೃತರಾಗಿ ಸಮಯ ಸಮಯಕ್ಕೆ ಅವುಗಳ ತಪಾಸಣೆ ಮಾಡಿಕೊಳ್ಳಿ ಎಂದು ಪಡೇಕನೂರ ಗ್ರಾಮದ ದಾಸೋಹ ವಿರಕ್ತ ಮಠದ ಪೀಠಾಧಿಪತಿ ಪ.ಪೂ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಹೇಳಿದರು.

ದಾಸೋಹ ವಿರಕ್ತ ಮಠದ ಜಾತ್ರೋತ್ಸವ ಅಂಗವಾಗಿ ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂದತ್ವ ನಿವಾರಣಾ ಸಂಸ್ಥೆ ವಿಜಯಪುರ ಇವರ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡ ನೇತ್ರ ಉಚಿತ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ಸಾವಿರಾರು ಜನರ ಬಾಳಿಗೆ ಬೆಳಕು ನೀಡುವ ಕಾರ್ಯವನ್ನು



ಮಾಡುತ್ತಿರುವ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥರಾದ ಡಾ.ಪ್ರಭುಗೌಡ ಲಿಂಗದಳ್ಳಿ ಹಾಗೂ ಅವರ ತಂಡದ ಈ ಸೇವೆ ಶ್ಲಾಘನೀಯವಾದದ್ದು ಎಂದರು. ಈ ನೇತ್ರ ಉಚಿತ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಸುಮಾರು 125 ಜನರು ತಪಾಸಣೆ ಮಾಡಿಸಿಕೊಂಡರು. ಅದರಲ್ಲಿ 30 ಜನರನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ಶಿಬಿರದಲ್ಲಿ ಅನುಗ್ರಹ ಕಣ್ಣಿನ ಆಸ್ಪತ್ರೆಯ ಡಾ.ಬೀಬಿ ಆಸ್ಮಾ, ಮಹಾಂತೇಶ, ಸಿಬ್ಬಂದಿಗಳಾದ ನಾಯಕ್ ಪವಾರ, ಸೌಮ್ಯ ಕೊಟ್ರಶೆಟ್ಟಿ, ಪ್ರತಿಕ್ಷಾ, ಅಲ್ಲಮ ಪ್ರಭು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅನುಗ್ರಹ ಆಸ್ಪತ್ರೆ ಮುಖ್ಯಸ್ಥ, ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಅವರ ಸಮಾಜಮುಖಿ ಸೇವಾ ಕಾರ್ಯಗಳು ಅನನ್ಯವಾಗಿವೆ. ಬಡವರ ಕುರಿತು ಅವರಿಗೆ ಅಪಾರ ಕಾಳಜಿ ಇದೆ. ಪೂಜ್ಯ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಪಡೇಕನೂರ.

# ಯಶಸ್ವೀನಿ ಆರೋಗ್ಯ ಸುರಕ್ಷಾ ಸೌಲಭ್ಯ ಸದುಪಯೋಗ ಪಡೆಯಲು ಕೋರಿಕೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಫೆ. 25 ಆಳಂದ ತಾಲೂಕಿನ ಎಲ್ಲಾ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ/ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ಸನ್ 2024-25 ಸಾಲಿಗಾಗಿ ಕರ್ನಾಟಕ ರಾಜ್ಯ ಸರಕಾರದ ಪ್ರಾಯೋಜಿತ ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆಯಡಿ ನೋಂದಣಿ ಮಾಡಲು/ಹಿಂದಿನ ವರ್ಷದಲ್ಲಿ ಈಗಾಗಲೇ ನೊಂದಣಿ ಮಾಡಿಸಿಕೊಂಡಿರುವ ಸಹಕಾರಿ ಸದಸ್ಯರುಗಳು ನವೀಕರಣ ಮಾಡಿಸಲು ಮಾರ್ಚ 31ರಂದು ಕೊನೆಯ ದಿನಾಂಕವಾಗಿದೆ. ಆಸಕ್ತ ರೈತರು ಸಹಾಕರ ಸದಸ್ಯರು ತಮ್ಮ ಹತ್ತಿರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸಂಪರ್ಕಿಸಿ ಯೋಜನೆಯ ಸೌಲಭ್ಯ ಪಡೆದುಕೊಳ್ಳಲು ಕಲಬುರಗಿ ತಾಲೂಕಿನ ಆಳಂದ ಸಹಕಾರ ಅಭಿವೃದ್ಧಿ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಳಗೇರಿ ನಿವಾಸಿಗಳ ಫ್ಲ್ಯಾಟ್ ಶೀಘ್ರವೇ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಫೆ.25: ಇಲ್ಲಿಯ ಹೊರ ವಲಯದ ನೀರು ಶುದ್ಧೀಕರಣ ಘಟಕದ ಸಮೀಪ ನಿರ್ಮಾಣ ಹಂತದಲ್ಲಿರುವ ಮೂರು ಅಂತಸ್ತಿನ ಫ್ಲ್ಯಾಟ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಭೇಟಿ ನೀಡಿ ವೀಕ್ಷಿಸಿದರು. ಅಧಿಕಾರಿಗಳ ತಂಡದೊಂದಿಗೆ ಮಂಗಳವಾರ ಭೇಟಿ ನೀಡಿದ ಅವರು ಫ್ಲ್ಯಾಟ್‌ನ ಪ್ರತಿ ಬ್ಲಾಕ್‌ಗೂ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ನಂತರ ಮಾತನಾಡಿದ ಅವರು, ಪಟ್ಟಣದ ಬಡ ಕುಟುಂಬಗಳು, ಕೊಳಗೇರಿ ನಿವಾಸಿಗಳು ಮತ್ತು ಮಧ್ಯಮ ವರ್ಗದವರ ಸ್ವಂತ ಮನೆ ಕನಸು ಶೀಘ್ರದಲ್ಲೇ ನನಸಾಗಲಿದೆ. ವಿವಿಧ ಯೋಜನೆಯಡಿ 21.87 ಕೋಟಿ ರೂ ಅನುದಾನ ಒದಗಿಸಿ 6 ಎಕರೆ ವಿಶಾಲ ಪ್ರದೇಶದಲ್ಲಿ ಮೂರು ಅಂತಸ್ತಿನ ಫ್ಲಾ ??ಟ್ ನಿರ್ಮಾಣ ಮಾಡಲಾಗುತ್ತಿದೆ.

34 ಬ್ಲಾಕ್‌ಗಳಿದ್ದು ಪ್ರತಿಯೊಂದರಲ್ಲಿ 12 ಮನೆಗಳಿವೆ. ಒಟ್ಟು 400 ಮನೆಗಳು ಹೊಂದಿವೆ. ಪ್ರತಿ ಮನೆಯಲ್ಲಿ ಹಾಲ್, ಅಡುಗೆ ಕೋಣೆ, ಮಲಗುವ ಕೋಣೆ, ಸ್ನಾನಗೃಹ, ಶೌಚಾಲಯವಿದ್ದು, 250 ಚ.ಅಡಿ ವಿಸ್ತೀರ್ಣವನ್ನು ಹೊಂದಿರುತ್ತವೆ.

ಪ್ರತಿ ಮನೆಗೆ 4.98 ಲಕ್ಷ ರೂ. ವೆಚ್ಚ ತಗಲಿದ್ದು, ಕೇಂದ್ರ ಸರಕಾರದ ಪಾಲು 1.50 ಲಕ್ಷ ರೂ ರಾಜ್ಯ ಸರಕಾರದ ಪಾಲು ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ 2 ಲಕ್ಷ ರೂ, ಇತರರಿಗೆ 1.20 ಲಕ್ಷ ರೂ ಫಲಾನುಭವಿಗಳ ಪಾಲು ಎಸ್‌ಸಿ/ಎಸ್‌ಟಿ 10% ಮತ್ತು ಇತರರಿಗೆ 15% ಆಗಿದೆ. ರಸ್ತೆ, ಚರಂಡಿ, ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳೊಂದಿಗೆ ಕಟ್ಟಡ ಮಾದರಿಯಾಗಿ ನಿರ್ಮಾಣಗೊಂಡಿವೆ. ಕಟ್ಟಡದ ಬಹುತೇಕ ಕಾಮಗಾರಿ ಪೂರ್ಣಗೊಂಡಿದೆ. ಸಣ್ಣಪುಟ್ಟ ಕೆಲಸ ಬಾಕಿ ಇದ್ದು ಪೂರ್ಣಗೊಳ್ಳುತ್ತಲೇ ಕಟ್ಟಡ ಉದ್ಘಾಟಿಸಿ ಬಡ ಜನರ ವಾಸಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಹಣಮಂತರಾವ ಚವ್ಹಾಣ, ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ ಸೇರಿದಂತೆ ಹಲವರು ಇದ್ದರು.

## ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ತಾತ್ಕಾಲಿಕ ಆಯ್ಕೆ ಪಟ್ಟಿ

ಲಿಂಗಸುಗೂರು:ಫೆ.25:ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಶಿಶು ಅಭಿವೃದ್ಧಿ ಯೋಜನೆ ಲಿಂಗಸುಗೂರು ವ್ಯಾಪ್ತಿಯಲ್ಲಿ 2024–25ನೇ ಸಾಲಿಗೆ ಅಂಗನವಾಡಿ ಕಾರ್ಯಕರ್ತೆ–ಮತ್ತು ಸಹಾಯಕಿಯರು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರಂತೆ ಸದರಿ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿರುವುದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ:24–02–2025ರಿಂದ 04–03–2025 ರೊಳಗಾಗಿ ಸಮಯ ಬೆಳಗ್ಗೆ 10:00 ಘಂ–ಟೆ ಸಂಜೆ 5:30 ರವರೆಗೆ ಸಲ್ಲಿಸಬಹುದೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಲಿಂಗಸುಗೂರು ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಪತ್ರಕರ್ತರಿಗೆ ಉಚಿತ ಹೆಲ್ತ್ ಸ್ಕೀಂ ಜಾರಿಗೊಳಿಸಿ ಮುಖ್ಯಮಂತ್ರಿಗಳಿಗೆ ಕೆಯುಡಬ್ಲ್ಯೂಜೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಫೆ.25:ಪತ್ರಕರ್ತರಿಗೆ ಉಚಿತ ಆರೋಗ್ಯ ವಿಮೆ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಿ ಜಾರಿಗೊಳಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಸದಾ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರು, ಆಸ್ಪತ್ರೆಗಳಿಗೆ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿದ್ದು, ಅವರ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಿವೆ. ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಯೋಜನೆಯೊಂದನ್ನು ಜಾರಿಗೆ ತರಬೇಕು ಎಂದು



ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು, ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ವಿನಂತಿಸಿದ್ದಾರೆ.

ತುಮಕೂರಿನಲ್ಲಿ ನಡೆದ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹಕ್ಕೋತ್ತಾಯಕ್ಕೆ ಸ್ಪಂಧಿಸಿದ ಸಿಎಂ, ಬಜೆಟ್‌ನಲ್ಲಿ ಪತ್ರಕರ್ತರಿಗಾಗಿ ಪ್ರತ್ಯೇಕ ಹೆಲ್ತ್ ಸ್ಕೀಂ ಜಾರಿಗೆ ನೀಡುವುದಾಗಿ ಭರವಸೆ ನೀಡಿದ್ದನ್ನು ಪತ್ರದಲ್ಲಿ ಅವರು ನೆನಪಿಸಿದ್ದಾರೆ.

ಸರ್ಕಾರಿ ನೌಕರರಿಗೆ ನೀಡಿರುವ ಸಂಜೀವಿನಿ ಆರೋಗ್ಯ ಯೋಜನೆ ಮಾದರಿಯಲ್ಲಿಯೇ ಪತ್ರಕರ್ತರು ಮತ್ತು ಅವರ ಕುಟುಂಬಕ್ಕೆ ಆರೋಗ್ಯ ಯೋಜನೆ ಜಾರಿಗೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಪ್ರಭಾಕರ್ ಅವರಿಗೂ ಮನವಿ: ಪತ್ರಕರ್ತರ ಆರೋಗ್ಯ ಯೋಜನೆಯನ್ನು ಜಾರಿಗೊಳಿಸುವಂತೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಭೇಟಿ ಮಾಡಿದ ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ನೇತೃತ್ವದ ನಿಯೋಗ ಮನವಿ ಮಾಡಿದೆ. ಪತ್ರಕರ್ತರಿಗೆ ಆರೋಗ್ಯ ಯೋಜನೆ ಜಾರಿಗೊಳಿಸುವ ವಿಷಯ ಮುಖ್ಯಮಂತ್ರಿಗಳ ಗಮನದಲ್ಲಿದ್ದು ಈ ಬಗ್ಗೆ ಸಿಹಿ ಸುದ್ದಿ ಪತ್ರಕರ್ತರ ಸಮುದಾಯಕ್ಕೆ ಲಭ್ಯವಾಗಲಿದೆ ಎನ್ನುವ ಭರವಸೆಯನ್ನು ಕೆ.ವಿ.ಪ್ರಭಾಕರ್ ಅವರು ವ್ಯಕ್ತಪಡಿಸಿದ್ದಾರೆ. ಹಿಂದುಳಿದ ವರ್ಗ, ಎಸ್ಸಿ ಎಸ್ಟಿ ಹಾಗೂ ಬ್ರಾಹ್ಮಣ ಪತ್ರಿಕೆಗಳ ಜಾಹೀರಾತು ಬಾಬ್ತು 108 ಕೋಟಿ ರೂ ಬಾಕಿ ಇದ್ದು, ಅದನ್ನು ಬಿಡುಗಡೆ ಮಾಡಿಸಲು ಶೀಘ್ರ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಕೆಯುಡಬ್ಲ್ಯೂಜೆ ಮನವಿ ಮಾಡಿದೆ. ನಿಯೋಗದಲ್ಲಿ ಕೆಯುಡಬ್ಲ್ಯೂಜೆ ರಾಜ್ಯ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ರಾಜ್ಯ ಸಮಿತಿ ಸದಸ್ಯ ಚೆಲುವರಾಜು ಮತ್ತಿತರರು ಹಾಜರಿದ್ದರು.

# ಎಂ ಎಸ್ ಪಿ ಎಲ್ ಸ್ಟೀಲ್ ಕಾರ್ಖಾನೆ ಆರಂಭಕ್ಕೆ ತೀವ್ರ ವಿರೋಧ ಕೊಪ್ಪಳ ಸಂಪೂರ್ಣ ಬಂದ್ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಫೆ,25: ನಗರದಲ್ಲಿ ಎಂಎಸ್ಪಿಎಲ್ ಫ್ಯಾಕ್ಟರಿ ವಿಸ್ತರಣೆ ವಿರೋಧಿಸಿ ಸೋಮವಾರ ಕರೆ ನೀಡಲಾಗಿದ್ದ ಕೊಪ್ಪಳ ಬಂದ್ ಪ್ರತಿಭಟನಾ ರ್ಯಾಲಿ ನಂತರ ತಾಲೂಕು ಕ್ರೀಡಾಂಗಣದಲ್ಲಿ ನಡೆದ ಬಹಿರಂಗ ಸಮಾವೇಶದಲ್ಲಿ ಮಾತನಾಡಿದ ಶ್ರೀಗಳು, ಫ್ಯಾಕ್ಟರಿ ಬರುವುದಕ್ಕೆ ಬರಲು ನಮ್ಮ ವಿರೋಧವಿಲ್ಲ. ಆದರೆ ಈಗಾಗಲೇ ಬಂದಿರುವ ಫ್ಯಾಕ್ಟರಿಗಳಿಂದ ಜನರಿಗಾಗಿರುವ ತೊಂದ–ರೆ, ಅವುಗಳ ನಿವಾರಣೆಯ ನಂತರ ಜನ–ಜಾನುವಾರು ಜೀವಹಾನಿಯಾಗದೇ, ಪರಿಸರಕ್ಕೆ ಧಕ್ಕೆಯಾಗದೇ ಇರುವ ಭರವಸೆ ನೀಡಿದ ಬಳಿಕ ಜನಾಭಿಪ್ರಾಯ ಪಡೆದು ಮುಂದುವರಿಯಿರಿ ಎಂದರು.

ಕೊಪ್ಪಳ: ಸರಕಾರದಲ್ಲಿ ಅತ್ಯಂತ ಪ್ರಭಾವಿಗಳಾದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಶಾಸಕ ರಾಘವೇಂದ್ರ ಹಿಟ್ನಾಳ ಹಾಗೂ ಸಂಸದ ರಾಜಶೇಖರ ಹಿಟ್ನಾಳ ನೀವ ಏನ್ ಮಾಡ್ತಿರೊ ಗೊತ್ತಿಲ್ಲ,



ಆದೇಶ ತಗೊಂಡ ಕೊಪ್ಪಳಕ್ಕ ಬರ್ರಿ" ಎಂದು ಕೊಪ್ಪಳದ ಸಂಸ್ಥಾನ ಶ್ರೀ ಗವಿಮಠದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಜನಪ್ರತಿನಿಧಿಗಳಿಗೆ ತಾಕೀತು ಮಾಡಿದರು.

ಸದ್ಯಕ್ಕಂತು ಕೊಪ್ಪಳ ಸುತ್ತಮುತ್ತ ಯಾವ ಫ್ಯಾಕ್ಟರಿಗಳು ಬರುವುದು ಬೇಡ. ಈಗ ಸರಕಾರದ ಹೊಣೆ ದೊಡ್ಡದು, ಸರಕಾರದಲ್ಲಿ ಪ್ರಭಾವ ಇರುವ ಜಿಲ್ಲೆಯ ಜನಪ್ರತಿನಿಧಿಗಳ ಜವಾಬ್ದಾರಿಯೂ ದೊಡ್ಡದು. ಬರೀ ಈ ಮೂವರು ಮಾತ್ರವಲ್ಲ, ಎಲ್ಲ ಜನಪ್ರತಿನಿಧಿಗಳು ಸಹ ಜನರ ಜೀವ–ಜೀವನಕ್ಕಾಗಿ ಯೋಚಿಸಬೇಕು ಎಂದು ಸಲಹೆ ನೀಡಿದರು. ದೇಶದ ಪ್ರಗತಿಗೆ ಕಾರ್ಖಾನೆಗಳು ಬೇಕು. ಆದರೆ ಯಾವ ಭಾಗದಲ್ಲಿ ಎಷ್ಟು ಮುಖ್ಯ ಅಂತ ನೋಡಬೇಕು. ಕೊಪ್ಪಳ ತಾಲೂಕಿನಲ್ಲಿ 202 ಫ್ಯಾಕ್ಟರಿಗಳಿವೆ. ಸುತ್ತ ಫ್ಯಾಕ್ಟ–ರಿಯಾದ್ರೆ ಜನ ಇರೋದಾದ್ರು ಎಲ್ಲಿ? ಇದೇ ರೀತಿ ಫ್ಯಾಕ್ಟರಿ ಆರಂಭವಾದ್ರೆ ಕೊಪ್ಪಳ ನರಕವಾಗುತ್ತದೆ. ತೊಟ್ಟಿಲ ಕಾರ್ಯಕ್ರಮಕ್ಕೆ ಹೋಗೋರು ಕಡಿಮೆಯಾಗುತ್ತಾರೆ.

ಹೆಣಕ್ಕೆ ಹೋಗೋರ ಸಂಖ್ಯೆ ಹೆಚ್ಚಾಗುತ್ತದೆ. ಸದ್ಯ ಕೊಪ್ಪಳ ತಿಪ್ಪೆ ಆದಂತಾಗಿದೆ. ಸುತ್ತಮುತ್ತಲಿನ ಜನರ ಸ್ಥಿತಿ ನೋಡಿದರೆ ಕಣ್ಣೀರು ಬರುತ್ತೆ. ಸಣ್ಣಮಕ್ಕಳಿಗೆ ಕ್ಯಾನ್ಸರ್, ಅಸ್ತಮಾ ಬರುತ್ತಿದೆ ಎಂದು ಅವರು ಭಾವುಕರಾಗಿ ನುಡಿದರು.

ಕೊಪ್ಪಳ ಸಾಂಸ್ಕೃತಿಕ ರಾಜಧಾನಿಯಾಗಿದೆ. ಬಿಳಿಯರಳೆಯಂತಿರುವ ಕೊಪ್ಪಳ ಎಣದು ಬಣ್ಣಿಸಿಕೊಂಡ ಕೊಪ್ಪಳ ಇದೀಗ ಕರಿ ಅರಳೆಯಂತಾಗಿದೆ.

# ರಸ್ತೆ ನಿರ್ಮಾಣ, ರೈಲು ನಿಲ್ದಾಣ ಸೇರಿ ಮೂಲ ಸೌಕರ್ಯ ಕುರಿತು ಮನವಿ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಫೆ.25:ರಸ್ತೆ ನಿರ್ಮಾಣ, ರೈಲು ನಿಲ್ದಾಣ ಸೇರಿ ಮೂಲ ಸೌಕರ್ಯ ಕುರಿತು ಸಾಮಾಜಿಕ ಕಾರ್ಯಕರ್ತ ಗುಂಡಪ್ಪಾ ಗುರುನಾಥ್ ಬೇಲ್ಲೆ ಮದನೂರ್ ನೇತೃತ್ವದಲ್ಲಿ ಕಮಲನಗರ ಪಟ್ಟಣಕ್ಕೆ ಭೇಟಿ ನೀಡಿದ ಸಂಸದ ಸಾಗರ ಖಂಡ್ರೆಯವರಿಗೆ ಮನವಿ ಸಲ್ಲಿಸಿದರು.

ಮದನೂರ ಗ್ರಾ.ಪಂ. ವ್ಯಾಪ್ತಿಯ ಮದನೂರ ಮತ್ತು ಖತಗಾಂವ ಗ್ರಾಮದ ಸಂಪರ್ಕ ರಸ್ತೆ ಅಭಿವೃದ್ಧಿ, ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಖತಗಾಂವ್ ಗ್ರಾಮದಿಂದ



ರಂಡ್ಯಾಳ, ಕೊಟಗ್ಯಾಳ, ರಾಂಪೂರ ಕ್ರಾಸ್, ರಾವಣಗಾವ್, ಮದನೂರ ಗ್ರಾಮದಿಂದ ಮಹಾರಾಷ್ಟ್ರದ ತೊಗರಿ, ರಾವಣಗಾಂವ ಸೇರಿದಂತೆ ಎರಡೂ ಗ್ರಾಮಗಳಿಗೆ ಸಂಪರ್ಕ ಕಲ್ಪಸುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ತಿಳಿಸಿದರು.

ಔರಾದ ತಾಲೂಕಿನ ಏಕೈಕ ರೈಲು ನಿಲ್ದಾಣ ವಾಗಿರುವ ಕಮಲನಗರ ರೈಲು ನಿಲ್ದಾಣದಲ್ಲಿ ಎಲ್ಲಾ ಎಕ್ಸಪ್ರೆಸ್ ರೈಲು ನಿಲ್ಲಿಸಿ ಇಲ್ಲಿನ ಜನರಿಗೆ ಅನುಕೂಲ ಮಾಡುವಂತೆ ತಮ್ಮ ಮನವಿ ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

ಮುರ್ಕಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಮೂಲ ಸೌಕರ್ಯಗಳು ಒದಗಿಸಿ ಕೊಟ್ಟರೆ ರೈತರಿಗೆ ಹಾಗೂ ತಾಲೂಕಿನ ಜನರಿಗೆ ಸಂಚಾರ–ಕ್ಕೆ ತೊಂದರೆ ಆಗುವುದಿಲ್ಲ ಎಂದು ಗುಂಡಪ್ಪಾ ಬೇಲ್ಲೆ ಆಗ್ರಹಿಸಿದರು. ಈ ವೇಳೆ ಮುಖಂಡರಾದ ಪ್ರವೀಣ ಪಾಟೀಲ, ಸೂರ್ಯಕಾಂತ ಬಿರಾದಾರ, ಸಂತೋಷ ಬಿರಾದಾರ, ಸಾಯಿನಾಥ ಕಾಂಬಳೆ, ಪ್ರವೀಣ ಕದಂ ಸೇರಿದಂತೆ ಇನ್ನಿತರ ಇದ್ದರು.

# ಮಹಾರಾಷ್ಟ್ರದ ವಾರಧಾ ಹತ್ತಿರ ಅಫಘಾತ ಬೀದರ್ ಜಿಲ್ಲೆಯ 15 ಜನರಿಗೆ ಗಂಭೀರ ಗಾಯ





ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 25 : ಇಂದು ನಸುಕಿನಲ್ಲಿ ಮಹಾರಾಷ್ಟ್ರದ ವಾರಧಾ ಬೈಪಾಸ್ ಹತ್ತಿರದಲಿ ಕುಂಭ ಮೇಳ ಮುಗಿಸಿ ಬೀದರ್ ಗೆ ಬರುತ್ತಿರುವ ಸಮಯದಲ್ಲಿ ಟ್ರಕ್ ಹಾಗೂ ಟೆಂಪೋ ಟ್ರಾವೆಲ್ ನಡುವೆ ಮುಖಾಮುಖಿ ಅಫಘಾತ್ ಸಂಭವಿಸಿ ಬೀದರ್ ಜಿಲ್ಲೆಯ ಸುಮಾರು 15 ಜನರು ಗಾಯಗೊಂಡಿದ್ದಾರೆ ಅವರನ್ನು ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಯುತ್ತಿದ್ದಾರೆ, ಅವರಿಗೆ ಸರಿಯಾದ ಚಿಕಿತ್ಸೆ ನೀಡಿ ಸುರಕ್ಷಿತವಾಗಿ ಬೀದರ್ ಕರೆ ತರುವುದ್ದಕ್ಕಾಗಿ ಜಿಲ್ಲಾ ಆಡಳಿತ ಸಹಾಯ ಮಾಡಬೇಕೆಂದು ಬಿಜೆಪಿ ಮುಖಂಡರಾದ ಈಶ್ವರ್‌ಸಿಂಗ್ ಠಾಕೂರ ಹಾಗೂ ಬೀದರ್ ಭಾವಸಾರ ಕ್ಷತ್ರೀಯ ಸಮಾಜದ ಮುಖಂಡರು ಸೇರಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಬೀದರ್ ಭಾವಸಾರ್ ಕ್ಷತ್ರಿಯ ಸಮಾಜದ ಅಧ್ಯಕ್ಷರಾದ ಸಂಜು ಘನಾತೆ, ಕರ್ಯರ್ಶಿ ಸತ್ಯಪ್ರಕಾಶ್, ಪ್ರವೀಣ್ ಸರ್ಯನ, ರಮೇಶ್ ದೇವತರಾಜ್, ವಿವೇಕ್ ಅಂಬುರೇ, ರಾಜು ಜೆರ್ಗ, ಅಶೋಕ್ ತಾಂದಳೆ, ಜಗದೀಶ್ ಸರ್ಯನ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


ಕರ್ನಾಟಕ ಸರಕಾರ

**ಉಪನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ**

ಮಿನಿ ವಿಧಾನಸೌಧ ಆವರಣ, ಕಲಬುರಗಿ ಜಿಲ್ಲೆ ಕಲಬುರಗಿ–585102, ಇ–ಮೇಲ್ : ddkk.dpue@gmail.com

ಸಂಖ್ಯೆ: ಶಾಶಿಇ(ಪಪೂ)/ಉನಿ(ಕ)/ಇ–ಟೆಂಡರ್/ಅಲ್ಪಾವಧಿ.ಟೆಂಡರ್/2024–25 ದಿನಾಂಕ : 24–02–2025

**ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)**

ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಕಲಬುರಗಿ ಇವರಿಂದ ಈ ಕೆಳಕಂಡಂತೆ ಆಯ್ದ 07 ಸರ್ಕಾರಿ ಆದರ್ಶ ಪದವಿ ಪೂರ್ವ ಕಾಲೇಜುಗಳಿಗೆ ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮತ್ತು ಅಳವಡಿಕೆ ಮಾಡುವ 07 ದಿನಗಳ ಅಲ್ಪಾವಧಿ ಮರು ಟೆಂಡರನ್ನು KTPP ನಿಯಮಾನುಸಾರ ಖರೀದಿ ಹಾಗೂ ಪೂರೈಸುವ ಕುರಿತು ಇ–ಟೆಂಡರ್ ಅನ್ನು ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

**E-Tender Notification for Supply and Installation of to 07 Adarsha Govt PU Colleges Kalaburagi**

1) ವಿವರಗಳು : **Supply and Installation of Library with digital facilities,** 2) ಟೆಂಡರ್ ಸಂಖ್ಯೆ: PUED/2024-25/IND0046/CALL-2, 3) ಮೊತ್ತ ರೂ. ಲಕ್ಷಗಳಲ್ಲಿ : **35.00**

ಸಂಪೂರ್ಣ ಟೆಂಡರ್ ವಿವರಗಳನ್ನು ಅಂತರ್ಜಾಲ https://kpp.karnataka.govl.in ನಲ್ಲಿ ವೀಕ್ಷಿಸಬಹುದಾಗಿದ್ದು ಇ–ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ **24–02–2025,** ಕೊನೆಯ ದಿನಾಂಕ **04–03–2025 ಸಂಜೆ 5.00 ಗಂಟೆ ಆಗಿದೆ.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನ್ನು ಸಂಪರ್ಕಿಸುವುದು.

ಸಹಿ/– ಉಪನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1009/ಕೆ.ಎಸ್.ಎಂ.ಸಿ.&ಎ/2024–25



**ನಗರಸಭೆ ಕಾರ್ಯಾಲಯ ಬೀದರ**

ಸಂಖ್ಯೆ:ಬಿಎಂಸಿ/ಇಎನ್‌ಜಿ/ಸಿಆರ್– /2024–25 ದಿನಾಂಕ:19–02–2025

**:: ಟೆಂಡರ್ ಪ್ರಕಟಣೆ ::**

1) ಕಾಮಗಾರಿ / ಸರಕು / ಸೇವೆಯ ವಿವರ: DMA/2024-25/EL/WORK_INDENT35938 (FOR SC), DMA/2024-25/OW/WORK_INDENT35940, DMA/2024-25/OW/WORK_INDENT 35941 (FOR CAT-IIA), DMA/2024-25/OW/WORK_INDENT35943, DMA/2024-25/EL/WORK_INDENT35942, DMA/2024-25/EL/WORK_INDENT32303 (FOR SC), DMA/2024-25/OW/WORK_INDENT35948 (FOR CAT-IIA), DMA/2024-25/OW/WORK_INDENT35950 (FOR ST), DMA/2024-25/OW/WORK_INDENT35952 (FOR CAT-IIA), DMA/2024-25/OW/WORK_INDENT35954, DMA/2024-25/OW/WORK_INDENT35955, DMA/2024-25/OW/WORK_INDENT35956, DMA/2024-25/EL/WORK_INDENT35958 (FOR SC), DMA/2024-25/OW/WORK_INDENT35959, DMA/2024-25/OW/WORK_INDENT35961 (FOR CAT-IIA), DMA/2024-25/OW/WORK_INDENT35962, DMA/2024-25/EL/WORK_INDENT35963 (FOR CAT-I), DMA/2024-25/EL/WORK_INDENT35969 (FOR CAT-IIA), DMA/2024-25/OW/WORK_INDENT35970, DMA/2024-25/WS/WORK_INDENT35983, DMA/2024-25/OW/WORK_INDENT36429, DMA/2024-25/OW/WORK_INDENT36430, DMA/2024-25/OW/WORK_INDENT36432, DMA/2024-25/OW/WORK_INDENT36434 (FOR SC), DMA/2024-25/OW/WORK_INDENT36436 (FOR SC), DMA/2024-25/OW/WORK_INDENT36437, DMA/2024-25/OW/WORK_INDENT36438, DMA/2024-25/OW/WORK_INDENT36439 (FOR ST), DMA/2024-25/OW/WORK_INDENT36440 DMA/2024-25/OW/WORK_INDENT36441, DMA/2024-25/OW/WORK_INDENT 36442 (FOR CAT-I), 2) ಕಾಮಗಾರಿಯ ಅಂದಾಜು ಮೊತ್ತ: e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು: 17-03-2025 upto 04.00 PM, 6) ಟೆಂಡರ ತೆರೆಯುವ ದಿನಾಂಕ: 18-03-2025 at 4.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಪೌರಾಯುಕ್ತರು, ನಗರಸಭೆ ಬೀದರ. ಇ–ಮೇಲ್: itstaff_ulb_bidar@yahoo.com, 08482-240432, 8) ಅಂತರಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/– ಪೌರಾಯುಕ್ತರು
ನಗರಸಭೆ ಬೀದರ

ವಾ.ಸಾ.ಸಂ.ಇ/ಬೀದರ/419/ಕೆ.ಎಸ್.ಎಂ.ಸಿ.&ಎ/2024–25


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.